ಶ್ರೀ ಖಮರುಲ್ಲಾ ಇಸ್ಲಾಂ (ವಕ್ಫ್, ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಸಚಿವರು) : ನಾನು ಈ ಬಗ್ಗೆ Monday ಹೇಳುತ್ತೇನೆ.

ಅಧ್ಯಕ್ಷರು : ಸೋಮವಾರ ಹೇಳುತ್ತಾರೆ. ಈಗ ನಿಯಮ 69ರ ಮೇಲೆ ಚರ್ಚೆ.

7. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ

ವಿಷಯ : ರಾಜ್ಯದಲ್ಲಿ ತೀವ್ರತರವಾದ ಬರಗಾಲದಿಂದಾಗಿ ತೆಂಗು ಬೆಳೆ ಸಂಪೂರ್ಣ ನಾಶವಾಗಿರುವುದರಿಂದ ಹಾಗೂ ತೆಂಗು ಉತ್ಪನ್ನಗಳ ಬೆಲೆಗಳು ಕುಸಿದಿರುವುದರಿಂದ ರೈತರಿಗೆ ಉಂಟಾಗಿರುವ ತೊಂದರೆ ಕುರಿತು.

ಶ್ರೀ ಕೆ.ಎಂ.ಶಿವಲಿಂಗೇಗೌಡ (ಅರಸೀಕೆರೆ) : ಅಧ್ಯಕ್ಷರೆ, ತೆಂಗನ್ನು ಬೆಳೆಯತಕ್ಕಂಥ ಈ ಕರ್ನಾಟಕ ರಾಜ್ಯದಲ್ಲಿ ತೆಂಗು ಪ್ರಮುಖವಾದಂಥ ಕರ್ನಾಟಕ ರಾಜ್ಯದ ಬೊಕ್ಕಸಕ್ಕೆ ಆದಾಯವನ್ನು ತಂದುಕೊಡುವಂಥ ಮತ್ತು ಕಾಮಧೇನು ಕಲ್ಪವೃಕ್ಷ ಅನ್ನುವ ರೀತಿಯಲ್ಲಿ ಪ್ರತಿಯೊಬ್ಬ ನಾಗರಿಕನಿಗೂ ಬೇಕಾಗಿರತಕ್ಕಂಥ ಬಹಳ ಉತ್ತಮವಾಗಿರತಕ್ಕಂಥ ಆರ್ಥಿಕ, ಸಾಂಪ್ರದಾಯಿಕ, ಎಲ್ಲಾ ವಿಭಿನ್ನವಾಗಿರತಕ್ಕಂಥ ಲಕ್ಷಣಗಳ ಗುಣಮಟ್ಟವನ್ನು ಹೊಂದಿರತಕ್ಕಂಥ ಒಂದು ಬೆಳೆ. ಬಾಲ್ಯ ಜೀವನದಲ್ಲಿ ಬಹಳ ಸೊಗಸಾಗಿ ನಮ್ಮ ಭಾಗದ ರೈತರು ತೆಂಗಿನ ಬೆಳೆಯಲ್ಲಿ ಬಹಳ ಸುಖಕರವಾದಂಥ ಜೀವನವನ್ನು ನಡೆಸಿಕೊಂಡು ಬಂದಿದ್ದಾರೆ. ಆದರೆ 2002 ರಿಂದ ಪ್ರಾರಂಭವಾದಂಥ ನುಸಿರೋಗಪೀಡೆ ತೆಂಗಿನ ಮರಕ್ಕೆ ಕಾಣಿಸಿಕೊಂಡು ಅವತ್ತಿನಿಂದ ಇವತ್ತಿನವರೆಗೆ ತೆಂಗಿನ ಬೆಳೆಗೆ ಒಂದಲ್ಲ ಒಂದು ಗಂಡಾಂತರ ಕಾಣಿಸಿಕೊಂಡು ಇವತ್ತು ತೆಂಗಿನ ಬೆಳೆಯನ್ನು ಬೆಳೆಯತಕ್ಕಂಥ ಪ್ರತಿಯೊಬ್ಬ ರೈತನೂ ಸಹ ಸಂಕಷ್ಟವನ್ನು ಎದುರಿಸಬೇಕಾಗಿರತಕ್ಕಂಥ ಅನಿವಾರ್ಯ ಪರಿಸ್ಥಿತಿ ಕರ್ನಾಟಕ ರಾಜ್ಯದ ರೈತ ಬಾಂಧವರಿಗೆ ಬಂದಿದೆ ಎನ್ನತಕ್ಕಂಥದನ್ನು ಈ ಸಂದರ್ಭದಲ್ಲಿ ನಾನು ಈ ಸದನಕ್ಕೆ ತಿಳಿಸಲಿಕ್ಕೆ ಬಯಸುತ್ತೇನೆ. ಇವತ್ತು ಆ ನುಸಿರೋಗವನ್ನು ನಿವಾರಣೆ ಮಾಡಲಿಕ್ಕೆ ಸರ್ಕಾರವು ಕೂಡ ಬಹಳ ಪ್ರಮಾಣದಲ್ಲಿ ಸತತವಾದಂಥ ಪ್ರಯತ್ನವನ್ನು ಮಾಡಿತು. ಸರ್ಕಾರ ಯಾವ ರೀತಿ ಪ್ರಯತ್ನವನ್ನು ಮಾಡಿದರೂ ಕೂಡ ಪರಿಸರದ ವ್ಯವಸ್ಥೆಯೊಳಗೆ ಬಂದಂಥ ಒಂದು ಸಾಂಕ್ರಾಮಿಕ ರೋಗ ಪೂರ್ಣ ಪ್ರಮಾಣದಲ್ಲಿ ನಿವಾರಣೆ ಆಗಲಿಕ್ಕೆ ಸಾಧ್ಯತೆ ಆಗಲೇ ಇಲ್ಲ. ಇನ್ನೂ

ಕೂಡ ಆ ರೋಗ ಬಾಧೆಯಲ್ಲೇ ನಾವು ಇರತಕ್ಕಂಥ ಸಂದರ್ಭದಲ್ಲೇ ಇವತ್ತು ಬರಗಾಲದ ಬವಣೆಯಿಂದ ಅಂತರ್ಜಲದ ಮಟ್ಟ ಕುಸಿದು, ನೀರಾವರಿಯ ಪಂಪ್‌ಸೆಟ್‌ಗಳ ಮುಖಾಂತರ ವಿದ್ಯುಚ್ಛಕ್ತಿಯನ್ನು ಅವಲಂಬಿತವಾದಂಥ ಮತ್ತು ಕೊಳವೆಬಾವಿಗಳ ನೀರಿನ ಮುಖಾಂತರ, ಹನಿ ನೀರಾವರಿ ಪದ್ಧತಿ ಮುಖಾಂತರ ಅನೇಕ ಸಾವಿರಾರು ಎಕರೆಗಳಲ್ಲಿ ಆ ತೆಂಗಿನ ಬೆಳೆಯನ್ನು ಕರ್ನಾಟಕ ರಾಜ್ಯದಲ್ಲಿ ಬೆಳೆಯುತ್ತಿದ್ದೆವು. ಬರಗಾಲ ಬಂದು ಅಂತರ್ಜಲದ ಮಟ್ಟ ಮಹಳ ಪ್ರಮಾಣದಲ್ಲಿ ಕುಸಿಯುತು. ತಮ್ಮ ಮಕ್ಕಳನ್ನು ಯಾವ ರೀತಿ ಜೋಪಾನವಾಗಿ ಸಾಕುತ್ತೇವೋ ಆ ರೀತಿಯಲ್ಲಿ ತೆಂಗಿನ ಸಸಿಯನ್ನು ನೆಟ್ಟು ಅದು ಫಸಲಿಗೆ ಬರುವವರೆಗೂ ಅದನ್ನು ಬಹಳವಾಗಿ ಎಲ್ಲಾ ರೀತಿಯ ಪೋಷಣೆಯನ್ನು ಮಾಡಿ ಅದನ್ನು ಸಾಕಿ ಸಲಹಿ ಸುಮಾರು 10–15 ವಷಕ್ಕೆ ಬಂದು ಫಸಲನ್ನು ಕೊಡುತ್ತಿದ್ದಂಥ ಮರಗಳು ಇವತ್ತು ಸಂಪೂರ್ಣವಾಗಿ ವಿನಾಶದ ಅಂಚನ್ನು ತಲುಪಿದೆ. ಬಹುಶಃ ಅಧ್ಯಕ್ಷರು ಪರಿಶೀಲನೆ ಮಾಡುವುದಾದರೆ ನನ್ನ ಬಳಿ ಸ್ವಲ್ಪಮಟ್ಟಿಗೆ ಮಾಹಿತಿ ಇದೆ. ಅದನ್ನು ತಮ್ಮ ಮಾಹಿತಿಗೆ ಬೇಕಾದರೆ ಕಳುಹಿಸಿಕೊಡುತ್ತೇನೆ. 10–15 ವರ್ಷದ ಗಿಡದಲ್ಲಿ ಫಸಲನ್ನು ಕೊಡುವಂಥ ಸುಳಿ ಕಸಿದು ಲಕ್ಷಾಂತರ ಸಸಿಗಳು ಇವತ್ತು ಭೂಮಿಗೆ ಉರುಳಿರತಕ್ಕಂಥ ಪ್ರಸಂಗವನ್ನು ನಾವು ನೋಡುತ್ತಿದ್ದೇವೆ. ಆದ್ದರಿಂದ ಇವತ್ತು ನಾನು ಸನ್ಮಾನ್ಯ ಸಭಾಧ್ಯಕ್ಷರೆ, ತಮ್ಮ ಮುಖಾಂತರ ಸರ್ಕಾರದ ಗಮನಕ್ಕೆ ತರತಕ್ಕಂಥದ್ದು ಏನೆಂದರೆ, ಆ ನುಸಿರೋಗ ಬಂದಮೇಲೆ ತೆಂಗು ತನ್ನ ಗುಣಮಟ್ಟ ಕಳೆದುಕೊಂಡಿದೆ. 80–90 ಕಾಯಿಯನ್ನು ಕೊಡುತ್ತಿದ್ದ ಒಂದು ಗಿಡದ ಫಸಲು 40ಕ್ಕೆ ಬಂದು, ಅದರ ಗಾತ್ರ ಬಹಳ ಸಣ್ಣದಾಗಿ ಅದರ ವ್ಯವಸ್ಥೆಯನ್ನೇ, ಗುಣಮಟ್ಟವನ್ನೇ ಕಳೆದುಕೊಳ್ಳತಕ್ಕಂಥ ರೀತಿಯಲ್ಲಿ ಪರಿಸ್ಥಿತಿ ಇವತ್ತು ನಮಗೆ ಅನಿವಾರ್ಯವಾಗಿ ಬಂದಿದೆ. ಆದ್ದರಿಂದ ನಾನು ಸರ್ಕಾರವನ್ನು ಒತ್ತಾಯ ಮಾಡುವಂಥದ್ದು, ಇವತ್ತು ಈ ಒಂದು ಬೆಳೆ ನಾಶ ಏನಾಗಿದೆ, ಈ ಬೆಳೆಗೆ ಕೇಂದ್ರ ಸರ್ಕಾರದ ಬರ ಪರಿಹಾರ ನಿಧಿಯಿಂದ ಒಂದು ಮರಕ್ಕೆ ರೂ.25/– ರಿಂದ 100/– ಕೊಡುತ್ತೇವೆಂದು ಏನು ಭಾವನೆಯನ್ನು ವ್ಯಕ್ತಪಡಿಸಿದ್ದಾರೆ, ಅದು ನಿಜವಾಗಿಯೂ ಪರಿಹಾರ ಅಲ್ಲ. ದಯವಿಟ್ಟು ಅದನ್ನು ವಾಪಸ್ಸು ತೆಗೆದುಕೊಂಡು ಅದರ ಜೊತೆಯಲ್ಲಿ ರಾಜ್ಯ ಸರ್ಕಾರ ಇವತ್ತು ಕೊನೆಪಕ್ಷ ಒಂದು ತೆಂಗಿನ ಮರಕ್ಕೆ ರೂ.5,000/– ರಿಂದ ರೂ.7,000/–, ರೂ.8,000/– ರೂಪಾಯಿಯಾನ್ನಾದರೂ ಕೊಡಬೇಕು. ಯಾವ

ಮರ ತನ್ನ ಅಸ್ತಿತ್ವವನ್ನು ಕಳೆದುಕೊಂಡಿದೆ ಅದನ್ನು ಮತ್ತೆ ನೆಟ್ಟು ಅದನ್ನು ಬೆಳೆಸಬೇಕಾದರೆ ರೂ.10,000 ರೂಪಾಯಿ ಪರಿಹಾರವನ್ನಾದರೂ ಸರ್ಕಾರ ಒಂದು ಮರಕ್ಕೆ ಕೊಡಬೇಕಾದಂಥ ಅನಿವಾರ್ಯ ಪ್ರಸಂಗ ಇದೆ ಎನ್ನುವಂಥ ಮಾತನ್ನು ಈ ಸಂದರ್ಭದಲ್ಲಿ ನಾನು ಸರಕಾರವನ್ನು ಗಮನ ಸೆಳೆಯುವುದಕ್ಕೆ ಬಯಸುತ್ತೇನೆ. ಅದರ ಜೊತೆಗೆ ಬೆಳೆದಂಥ ಮರ ಬಿದ್ದುಹೋಗಿರುವಂಥದ್ದು ಮತ್ತು ಫಸಲಿನಲ್ಲಿ ವ್ಯತ್ಯಾಸ ಆಗಿ ಅದರ ಗುಣಮಟ್ಟವನ್ನು ಕಳೆದುಕೊಂಡು ಫಸಲುಗಳು ಕಡಿಮೆಯಾಗಿ ಕೋಟ್ಯಾಂತರ ರೂಪಾಯಿ ಇವತ್ತು ನಷ್ಟವಾಗಿರತಕ್ಕಂಥದ್ದು ಒಂದು ಕಡೆಯಾದರೆ ಮತ್ತೊಂದು ಕಡೆ ಮಾರುಕಟ್ಟೆ ಇದು ಬಹಳ ಮುಖ್ಯವಾದ ಪ್ರಶ್ನೆ. ಮಾರುಕಟ್ಟೆಯಲ್ಲಿ ನಾವೆಲ್ಲಾ ಯೋಚನೆಮಾಡುವುದಾದರೆ ಒಂದು ಬಾರಿಗೆ ರೂ.9,000/--ಕ್ಕೆ ಒಂದು ಕ್ವಿಂಟಾಲ್ ಕೊಬ್ಬರಿಯನ್ನು ಮಾರಾಟ ಮಾಡಿದಂಥ ದಿನಗಳು ಉಂಟು. ರೂ.10/–ರಿಂದ 12/– ರೂಪಾಯಿಗಳಿಗೆ ಒಂದು ತೆಂಗಿನ ಕಾಯಿಯನ್ನು ಮಾರಾಟ ಮಾಡಿದಂಥ ದಿನಗಳು ಉಂಟು. ಆದರೆ ಇವತ್ತಿನ ದಿವಸ ಸತತವಾಗಿ ರೈತ ರೂ.4,000/– ರೂಪಾಯಿಗೆ ಕೊಬ್ಬರಿಯನ್ನು ತೆಗೆದುಕೊಂಡು ಹೋದರೂ ತೆಗೆದುಕೊಳ್ಳದೇ ಇರತಕ್ಕಂಥ ಪರಿಸ್ಥಿತಿ ರೈತನಿಗೆ ಬಂದಿರುವುದಾದರೆ ಇದಕ್ಕೆ ಏನು ಪರಿಹಾರ ಮಾಡಬೇಕು ಎನ್ನುವ ನಿಟ್ಟಿನಲ್ಲಿ ಸರ್ಕಾರ ಯೋಚನೆ ಮಾಡಬೇಕಾಗುತ್ತದೆ. ಇವತ್ತು ರೈತರ ಸಂಕಷ್ಟಕ್ಕೆ ಬರಲೇಬೇಕಾದ ಅನಿವಾರ್ಯ ಪ್ರಸಂಗ ಸರ್ಕಾರಕ್ಕೆ ಇದೆ. ಮಾನ್ಯ ಸದಾನಂದಗೌಡರು ಮುಖ್ಯಮಂತ್ರಿಗಳು ಆಗಿದಂಥ ಕಾಲದಲ್ಲಿ ನಾವು ಒಂದು ನಿಯೋಗವನ್ನು ತೆಗೆದುಕೊಂಡು ಬಂದು ಅವತ್ತಿನ ದಿವಸ ನಾಫೆಡ್ ನಿಂದ ರೂ.5,350 ಎಂದು ನಿರ್ಣಯ ಮಾಡಿತ್ತು. ಅದಕ್ಕೆ ರೂ.650/–ಗಳನ್ನು ಸೇರಿಸಿ, ರೂ.700/– ಗಳನ್ನು ಸೇರಿಸಿ, ರೂ.6050/– ಗೆ ಒಂದು ಕ್ವಿಂಟಾಲ್ ಕೊಬ್ಬರಿಯನ್ನು ಖರೀದಿ ಮಾಡಿಸಬೇಕೆಂಬ ನಿರ್ಣಯವನ್ನು ಅವತ್ತಿನ ಸರ್ಕಾರ ತೆಗೆದುಕೊಂಡಿತು. 2–3 ತಿಂಗಳ ಕಾಲ ಸ್ವಲ್ಪಭಾಗವನ್ನು ಖರೀದಿಯನ್ನು ಮಾಡಿದರು. ಆದರೆ, ಅದರಿಂದ ಪೂರ್ಣ ಪ್ರಮಾಣದ ಕೊಬ್ಬರಿಯನ್ನು ಖರೀದಿಸುವುದಕ್ಕೆ ರೈತರಿಗೆ ನ್ಯಾಯವನ್ನು ದೊರಕಿಸಿಕೊಡುವುದಕ್ಕೆ ಪ್ರಾಮಾಣಿಕವಾದಂಥ ಪ್ರಯತ್ನ ನಡೆಯಲಿಲ್ಲ. ಅಲ್ಲಿಗೆ ನಿಲ್ಲಿಸಿದರು. ಈಗ ರೈತ ತನ್ನ ಇಕ್ಕಟ್ಟಿನ ಆರ್ಥಿಕ ಪರಿಸ್ಥಿತಿಯಲ್ಲಿ ರೂ.50 ಸಾವಿರ, ರೂ.2 ಲಕ್ಷ ಸಾಲ ತರುತ್ತಾನೆ. ಆ ಸಾಲ ತಂದಾಗ ಅವರು ಹಾಕತಕ್ಕಂಥ ಬಡ್ಡಿಗೆ

ಇವತ್ತು ಕೊಬ್ಬರಿಯನ್ನು ಏನು ಬಡುತ್ತೇವೆ? ಆ ಕೊಬ್ಬರಿಗೆ ಆ ಬಡ್ಡಿ ದುಡ್ಡು ಹೋಗಿ ಕೈಗಾತ ತೆಗೆದುಕೊಂಡಿದ್ದಕ್ಕೆ ಬರೀ ಖಾಲಿ ಗೋಣಿಚೀಲವನ್ನು ಮನೆಗೆ ತೆಗೆದುಕೊಂಡು ಅಳುತ್ತಾ ಬರುವಂಥ ಪರಿಸ್ಥಿತಿಯನ್ನು ನಾವು ಅನಿವಾರ್ಯವಾಗಿ ನೋಡುತ್ತಿದ್ದೇವೆ. ಆದ್ದರಿಂದ ದಯಮಾಡಿ ಸನ್ಮಾನ್ಯ ಅಧ್ಯಕ್ಷರೆ, ಇವತ್ತು ಸರ್ಕಾರ ಇದರ ಬಗ್ಗೆ ತೀಕ್ಷ್ಣವಾಗಿ ಆಲೋಚನೆಯನ್ನು ಮಾಡಬೇಕಾಗುತ್ತದೆ. ನಾನು ತೆಂಗಿನ ಬೆಳೆಯನ್ನು ಬೆಳೆಯತಕ್ಕಂಥವನಾಗಿದ್ದೇನೆಂದು ಮಾನ್ಯ ಜಯಚಂದ್ರ–ರವರು ಹೇಳುತ್ತಿದ್ದರು. ಇಲ್ಲಿ ಸುಮಾರು 50–60 ಜನ ಶಾಸಕರು ತೆಂಗಿನ ಬೆಳೆಯನ್ನು ಅವಲಂಬಿತವಾಗಿ ಆ ಪ್ರದೇಶದಿಂದಲೇ ಬಂದಿದವರಾಗಿರುತ್ತಾರೆ. ಬಿಡದಿ ಬಳಿ ಮಾನ್ಯ ವಿರೋಧ ಪಕ್ಷದ ನಾಯಕರು ಬೆಳೆಸಿರತಕ್ಕ 2–3 ಸಾವಿರ ತೆಂಗಿನ ಮರವನ್ನು ನಾವು ನೋಡಿದ್ದೇವೆ. ಇಲ್ಲದೇ ಹೋದರೆ ಆ ಭಾಗದ ಎಲ್ಲಾ ರೈತರು ವಿಷವನ್ನು ಕುಡಿಯುವ ಪರಿಸ್ಥಿತಿ ಇವತ್ತು ಅನಿವಾರ್ಯವಾಗಿ ಅವರಿಗೆ ಬಂದಿದೆ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇದೇ ರೇಟೆ ಇರುತ್ತದೆಂದು ಹೇಳಿ ಸಾಲವನ್ನು ಕೊಬ್ಬರಿ ಮಂಡಿ ವರ್ತಕರ ಹತ್ತಿರ, ಸಾಹುಕಾರ ಹತ್ತಿರ ತೆಗೆದುಕೊಳ್ಳುತ್ತೇವೆ. ಅವರು ಪಾಪ, 11/2, 2% ಪರ್ಸೆಂಟ್ ಬಡ್ಡಿಯ್ನು ಹಾಕುತ್ತಾರೆ. ಆ ಬಡ್ಡಿ ದುಡ್ಡಿಗೆ ಇವತ್ತು ನಾವು ಬೆಳೆದಂಥ ಎಲ್ಲಾ ಬೆಳೆಯನ್ನು ಅವರಿಗೆ ಬಿಡಬೇಕಾದ ಪರಿಸ್ಥಿತಿ ನಮಗೆ ಬಂದಿರುವ ಈ ಸನ್ನಿವೇಶದಲ್ಲಿ ಇದನ್ನು ಏನಾದರೂ ಮಾಡಿ ಒಂದು ಬೆಂಬಲ ಬೆಲೆಯನ್ನು ಕೊಟ್ಟು ಆ ರೈತರನ್ನು ಉಳಿಸುವ ಒಂದು ಪ್ರಾಮಾಣಿಕವಾದ ಪ್ರಯತ್ನ ಈ ಸರಕಾರದಿಂದ ಆಗಬೇಕಾಗಿದೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಅದರ ಜೊತೆಯಲ್ಲಿ ಇಷ್ಟನ್ನು ಕೊಟ್ಟರೆ ಆಗುವುದಿಲ್ಲ ಇವತ್ತು ನಾವು ಅಂತರ್ಜಲವನ್ನು ಕೊಡತಕ್ಕಂಥ, ಅಂತರ್ಜಲದ ಮಟ್ಟವನ್ನು ಹೆಚ್ಚಿಸತಕ್ಕ ಒಂದು ಪ್ರಾಮಾಣಿಕವಾದ ಪ್ರಯತ್ನ ಕೂಡಾ ಆಗಬೇಕಾಗಿದೆ. ನಾವು ಬಯಲುಸೀಮೆಯಲ್ಲಿ ಇರುವಂಥವರು, ನಮಗೆ ಇವತ್ತಿನ ದಿವಸ ಯಾವುದೇ ರೀತಿಯಾದ ನೀರಾವರಿ ಸೌಲಭ್ಯ ಇಲ್ಲದೇ ಇರುವಂತಹ ಸಂದರ್ಭದಲ್ಲಿ, ಆ ಬೆಳೆಯ ಅಂತರ್ಜಲದ ಮಟ್ಟವನ್ನು ಯಾವ ರೀತಿ ಹೆಚ್ಚಿಸಬೇಕು? ನಾನಾ ರೀತಿಯಲ್ಲಿ ಹೆಚ್ಚಿಸಬಹುದು. ನಾವು ಮಳೆಯ ನೀರಿನಿಂದ ಬಿದ್ದಂಥ ಜಲವನ್ನು, ಆ ಮಳೆಯ ನೀರನ್ನು ಅಂತರ್ಜಲವಾಗಿ ಪರಿವರ್ತನೆ ಮಾಡತಕ್ಕ ಅನೇಕ ಯೋಜನೆಗಳಿದ್ದರೂ ಕೂಡ ಆ ಯೋಜನೆಗಳು ನಿಷ್ಪ್ರಯೋಜಕವಾಗಿ ಆ

ಕೆಲಸವನ್ನು ಮಾಡದೇ ಇರುವ ಅನಿವಾರ್ಯ ಪ್ರಸಂಗ, ಸಂದರ್ಭ ಇವತ್ತಿನ ಪರಿಸ್ಥಿತಿಯಲ್ಲಿ ಬಂದಿದೆ. ಅದಕ್ಕಾಗಿ ಏನು ನದಿ ಮೂಲದಿಂದ ಇರುವ ನೀರಾವರಿಯನ್ನು ಕೆರೆಗಳಿಗೆ ತುಂಬಿಸುವಂಥ ಪ್ರಾಮಾಣಿಕವಾದ ಪ್ರಯತ್ನ ಕೂಡ ಆಗಬೇಕಾಗಿದೆ. ಆ ನಿಟ್ಟಿನಲ್ಲಿ ಕಾವೇರಿ ಬೇಸಿನ್, ಕೃಷ್ಣಾ ಬೇಸಿನ್‌ಗಳ ಬಗ್ಗೆ ನಿನ್ನೆಯೆಲ್ಲಾ ನಮ್ಮ ವಿರೋಧ ಪಕ್ಷದ ನಾಯಕರು ಸವಿಸ್ತಾರವಾಗಿ ಪ್ರಸ್ತಾಪ ಮಾಡಿದ್ದಾರೆ. ಅದು ಏನೇ ಇರಬಹುದು, ನೀವು ತಮಿಳುನಾಡಿಗೆ ಹೆದರಿ ಕುಳಿತುಕೊಂಡು ನಮಗ್ಯಾರಿಗೂ ನೀವು ಕುಡಿಯುವುದಕ್ಕೆ ನದಿ ನೀರು ಕೊಡುವುದಿಲ್ಲ, ಕೆರೆಗಳಿಗೆ ತುಂಬಿಸುವುದಕ್ಕೆ ನೀರು ಕೊಡುವುದಿಲ್ಲ. ನಮಗೆ ಯಾವ ನೀರನ್ನೂ ಕೊಡದೇ, ನಿಜವಾಗಿಯೂ ನಮ್ಮ ಬಯಲುಸೀಮೆ ಪ್ರದೇಶದವರಿಗೆ ಬಹಳ ಅನ್ಯಾಯವಾಗಿದೆ. ಅದಕ್ಕೋಸ್ಕರ, ನಾನು ಈ ಮಾತನ್ನು ಹೇಳುತ್ತಿದ್ದೇನೆ. ಮುಂದಿನ ದಿನಗಳಲ್ಲಿ ಅದೇನೇ ಕಾನೂನಿನ ಕಟ್ಟಳೆಗಳಿರಲಿ, ಅದು ನಡೆಯುತ್ತಿರುತ್ತದೆ. ಆದರೆ, ಕುಡಿಯುವುದಕ್ಕೆ ನೀರಿಲ್ಲದೆ ಸಾಯಬೇಕೆನ್ನುವ ಸಿದ್ಧಾಂತ ಎಲ್ಲೂ ಇಲ್ಲ, ಯಾವ ನಿಯಮವೂ ಇಲ್ಲ. ಸ್ವಾಭಾವಿಕವಾಗಿ ಒಬ್ಬ ಮನುಷ್ಯನನ್ನು ಉಳಿಸಿಕೊಳ್ಳಬೇಕಾದ ಸಂದರ್ಭದಲ್ಲಿ, ಇವತ್ತು ನಾವು ಅಂತರ್ಜಲ ಮಟ್ಟವನ್ನು ಹೆಚ್ಚಿಸುವುದಕ್ಕೆ ಪ್ರಾಮಾಣಿಕವಾದ ಪ್ರಯತ್ನ ಆಗಲೇಬೇಕು. ಅವತ್ತು ಮಾತ್ರ ಈ ತೆಂಗಿನ ಮರಗಳನ್ನು ನಾವು ಉಳಿಸುವುದಕ್ಕೆ ಸಾಧ್ಯವಾಗುತ್ತದೆ. ಕೆರೆ ಕೆರೆಗಳಿಗೆ ನೀರನ್ನು ತುಂಬಿಸುವ ಪ್ರಯತ್ನಕ್ಕೆ ಸರ್ಕಾರ ಮುಂದೆ ಬರಬೇಕೆನ್ನುವ ಮಾತನ್ನೂ ಸಹ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಇವತ್ತು ಮಾರುಕಟ್ಟೆಯಲ್ಲಿ ತೆಂಗಿಗೆ ಹೆಚ್ಚಿನ ಬೆಲೆ ಬರಬೇಕಾದರೆ, ಹೆಚ್ಚಿನ ಉತ್ಕೃಷ್ಟವಾದ ಬೆಲೆ ಬರಬೇಕಾದರೆ ಹೊರ ದೇಶಗಳಿಂದ ಎಣ್ಣೆಯನ್ನು, oil ಅನ್ನು import,ಮಾಡಿಕೊಳ್ಳುತ್ತಿದ್ದಾರೆ. ಈ ಆಮದನ್ನು ನಿಲ್ಲಿಸಬೇಕಾಗುತ್ತದೆ. ನಿಲ್ಲಿಸಿ, ಇವತ್ತು ನಮ್ಮಲ್ಲೇ ಇರತಕ್ಕ ಶುದ್ಧವಾದಂಥ ಕೊಬ್ಬರಿ ಎಣ್ಣೆಯನ್ನು ನಾವು ಉಪಯೋಗಿಸಿಕೊಳ್ಳತಕ್ಕಂಥ ವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಇವತ್ತು ನಮ್ಮ ರಾಜ್ಯ ಸರ್ಕಾರದ ಅಧೀನದಲ್ಲೇ ನಡೆಯತಕ್ಕ ಬೇಕಾದಷ್ಟು ಹಾಸ್ಟೆಲ್‌ಗಳು, ಬಿಸಿಯೂಟ ಹಾಗೂ ಅನೇಕ ಯೋಜನೆಗಳಿಗೆಲ್ಲಾ, ಬೇರೆ ಬೇರೆ palm oil ಅನ್ನು ಉಪಯೋಗಿಸುತ್ತಾರೆ. ಸರ್ಕಾರದಲ್ಲಿ ಶ್ರೀಯುತ ಜಯಚಂದ್ರರವರು ಇದ್ದಾರೆ. ದಯವಿಟ್ಟು, ಇದರ ಬಗ್ಗೆ ಮನಸ್ಸು ಮಾಡಬೇಕು. ಇದನ್ನೆಲ್ಲಾ ನಾನು ಸುಮ್ಮನೆ ಹೇಳುತ್ತಿಲ್ಲ. ನಮ್ಮ ಕೊಬ್ಬರಿ ಎಣ್ಣೆಯನ್ನು ನಾವೇ

ಉಪಯೋಗಿಸಿಕೊಳ್ಳುವುದಕ್ಕೆ ತಯಾರಿಲ್ಲ. ನಾವು ಮೊದಲು ಕೊಬ್ಬರಿ ಎಣ್ಣೆಯನ್ನು ಅಡುಗೆ ತಯಾರಿಕೆಯಲ್ಲಿ ಉಪಯೋಗಿಸಿ ತಿನ್ನಬೇಕು. ಕೊಬ್ಬರಿ ಎಣ್ಣೆಯನ್ನು ತಿಂದರೆ ಏನಾಗುತ್ತದೆ? ಇದಕ್ಕೆ ಸರ್ಕಾರ ಧೈರ್ಯ ಕೊಡಬೇಕು. ಇದು ಉತ್ತಮವಾಗಿರುವಂಥ ಎಣ್ಣೆ, ಇದನ್ನು ಏತಕ್ಕಾಗಿ ನೀವು ತಿನ್ನುವುದಿಲ್ಲ? ತಿನ್ನಬೇಕು ಎನ್ನುವ ಭಾವನೆ ಸರ್ಕಾರ ಇವತ್ತು ಸಾರ್ವಜನಿಕರಲ್ಲಿ, ಜನತೆಯಲ್ಲಿ ಮೂಡಿಸಬೇಕು. ಕೇರಳ ರಾಜ್ಯದಲ್ಲಿ ಈ ರೀತಿ ಅನೇಕ ರೀತಿಯ ಪ್ರಚಾರಗಳನ್ನು ಮಾಡಿ ಅವರು ಅನೇಕ ರೀತಿಯಲ್ಲಿ ಮಾರುಕಟ್ಟೆಯಲ್ಲಿ ಮುಂದೆ ಬರುತ್ತಿದ್ದಾರೆ. ಅದಕ್ಕೋಸ್ಕರ ನೀವೂ ಕೂಡ, ಮೊದಲು ಸರ್ಕಾರದ ವತಿಯಿಂದ ಅದನ್ನು ಮಾಡಬೇಕು.

ಶ್ರೀ ಟಿ.ಬಿ.ಜಯಚಂದ್ರ : ದಕ್ಷಿಣ ಕನ್ನಡ ಜಿಲ್ಲೆ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಇದನ್ನೇ ಬಳಕೆ ಮಾಡುವುದು.

ಅಧ್ಯಕ್ಷರು : ನಮ್ಮ ಮಲೆನಾಡಿನ ಭಾಗದಲ್ಲಿಯೂ ಇದನ್ನೇ ಉಪಯೋಗಿಸುವುದು.

ಶ್ರೀ ಟಿ.ಬಿ.ಜಯಚಂದ್ರ : ಏನಾಗಿದೆಯೆಂದರೆ, ನಮ್ಮ ಭಾಗಗಳಲ್ಲಿ ಒಂದು ಕೆಟ್ಟ ಪ್ರಚಾರವನ್ನು ಮಾಡಿದ್ದಾರೆ. ಈ ಕೊಬ್ಬರಿ ಎಣ್ಣೆಯನ್ನು ಉಪಯೋಗಿಸುವುದರಿಂದ ಕೊಲೆಸ್ಟ್ರಾಲ್ ಜಾಸ್ತಿಯಾಗುತ್ತದೆಂದು ಯಾರೋ ಪ್ರಚಾರ ಮಾಡಿರುವುದರಿಂದ ಇದೆಲ್ಲಾ ತೊಂದರೆ ಆಗಿದೆ. ನೀವು ಕೊಡುತ್ತಿರುವಂಥ ಸಲಹೆ ಏನು ಇದೆ, ಅದರ ಬಗ್ಗೆ ನಾವು ಪ್ರಚಾರವನ್ನು ಕೂಡ ಮಾಡಬೇಕಾಗುತ್ತದೆ. ಎಲ್ಲಿಯವರೆಗೂ ಕೂಡ ಒಂದು ಕಡೆ ಉತ್ಪಾದನೆ, ಮತ್ತೊಂದು ಕಡೆ ಬಳಕೆ, ಅದನ್ನು ಸರಿದೂಗಿಸುವ ಕೆಲಸವನ್ನು ಮಾಡದೇ ಇದ್ದರೆ ಬೆಲೆಯನ್ನು ಸ್ಥಿರೀಕರಣ ಮಾಡುವುದು ಕಷ್ಟವಾಗುತ್ತದೆ. ತಾವು ಹೇಳುತ್ತಿರುವಂಥದ್ದು ಸ್ವಾಗತ ಮಾಡುವ ಸಂಗತಿ. ಅದರ ಕಡೆಗೆ ಗಮನವನ್ನು ನಾವು ಕೊಡಲೇಬೇಕಾಗುತ್ತದೆ. ಗಮನವನ್ನು ಕೊಡೋಣ.

ಶ್ರೀ ವೈ.ಎನ್.ರುದ್ರೇಶ್‌ಗೌಡ : ಶ್ರೀಯುತ ಶಿವಲಿಂಗೇಗೌಡರು ಹೇಳುತ್ತಿರುವುದೆಲ್ಲಾ ಸತ್ಯ, ಅದರಲ್ಲಿ ಯಾವ ಅನುಮಾನವೂ ಇಲ್ಲ.

ಅಧ್ಯಕ್ಷರು : ಒಬ್ಬೊಬ್ಬರು ಮಾತನಾಡಿ. ರುದ್ರೇಶ್‌ಗೌಡರು ನಿಂತಿದ್ದಾರೆ. ಮೊದಲು ಇವರು ಮಾತನ್ನು ಪೂರೈಸಲಿ. ನೀವು ಆಮೇಲೆ ಮಾತನಾಡಿ. ನಿಮ್ಮ ರುಜು ಇದೆಯೇ?

ಶ್ರೀ ಕೆ.ಎಂ.ಶಿವಲಿಂಗೇಗೌಡ : ಕೊಬ್ಬರಿ ಎಣ್ಣೆಯಿಂದ ಕೊಲೆಸ್ಟ್ರಾಲನ್ನು ತೆಗೆಯುವಂಥ ವ್ಯವಸ್ಥೆ ಮಾಡಬೇಕು. ಇವತ್ತು ಹಾಲಿನ ಡೈರಿ ಯಾವ ರೀತಿ ಮುಂದೆ ಬಂದಿದೆ? ಹಾಲಿನಲ್ಲಿರುವಂಥ ಕೊಲೆಸ್ಟ್ರಾಲ್‌ನ್ನು ತೆಗೆಯುತ್ತಾರೆ, ಅದರಲ್ಲಿ ನಾನಾ ವಿಧಗಳನ್ನು ಮಾಡಿ ಮಜ್ಜಿಗೆ ಮಾರಾಟ ಮಾಡುತ್ತಾರೆ. ಅದರಿಂದ ಪೇಡಾಗಳನ್ನು ತಯಾರು ಮಾಡುತ್ತಾರೆ. ಕೇವಲ ಹಾಲನ್ನೇ ಮಾರಾಟ ಮಾಡಿದ್ದರೆ ಇವತ್ತು ಕರ್ನಾಟಕದಲ್ಲಿ ಹಾಲಿನ ಡೈರಿ ಉಳಿಯುತ್ತಿತ್ತೇ? ಶ್ರೀಯುತ ರೇವಣ್ಣನವರು ಒಂದು ವ್ಯವಸ್ಥಿತವಾದ ಯೋಜನೆಗಳನ್ನು ಮಾಡಿರುವುದರಿಂದ ಇವತ್ತು ಒಂದು ಉತ್ತಮ ವ್ಯವಸ್ಥೆ ಇರುವಂಥ ಒಂದು ಮಹಾಮಂಡಲ ಉಳಿದಿರುವುದರಿಂದಲೇ ರೈತರು ಈ ಕರ್ನಾಟಕ ರಾಜ್ಯದಲ್ಲಿ ಆರ್ಥಿಕವಾಗಿ ಮುಂದೆ ಬರಲು ಸಹಕಾರಿ ಆಗಿದೆ. ಆ ಒಂದು ರೀತಿಯಲ್ಲಿ ಸರ್ಕಾರ ಪ್ರಯತ್ನ ನಡೆಸಿ, ಕೊಲೆಸ್ಟ್ರಾಲ್ ಹೆಚ್ಚಾಗಿದೆ ಎನ್ನುವ ಭಾವನೆಯನ್ನೇನು ರಾಜ್ಯದ ಜನತೆಯಲ್ಲಿ, ಸಾರ್ವಜನಿಕರಲ್ಲಿ ಮೂಡಿಸಿದ್ದಾರೆ, ಅದನ್ನು ಕಿತ್ತೊಗೆಯುವ ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡಬೇಕು. ಒಂದು ವೇಳೆ ಕೊಲೆಸ್ಟ್ರಾಲ್ ಹೆಚ್ಚಾಗಿದ್ದರೆ ಅದನ್ನು ಬೇರ್ಪಡಿಸುವಂಥ ಪ್ರಯತ್ನ ಕೂಡ ಸರ್ಕಾರದಿಂದ ಆಗಬೇಕೆನ್ನುವುದು ನನ್ನ ಒತ್ತಾಯ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಸನ್ಮಾನ್ಯ ಅಧ್ಯಕ್ಷರೆ, ನಾನು ಹೇಳವುದಕ್ಕೆ ಬಯಸುತ್ತೇನೆ.

ಅಧ್ಯಕ್ಷರು : ಬಹಳ ಜನ ಇದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಇವತ್ತು ಒಂದು ಉದಾಹರಣೆ ಕೊಡುತ್ತೇನೆ ಸನ್ಮಾನ್ಯ ಅಧ್ಯಕ್ಷರೆ, ಹೌದು, ಬಹಳ ಜನ ಇದ್ದಾರೆ. ಆದರೆ ಇದೆಲ್ಲಾ ಬಹಳ important issue, ನಮ್ಮ ಬಾಳು ಬದುಕಿನ –ಬದುಕು ಬಾಳಿನ ಒಂದು ನಿರ್ಧಾರ ಆಗಬೇಕಾಗಿರುವಂಥದ್ದು, ಇದನ್ನು ಬಿಟ್ಟರೆ ನಮಗೆ ಗತಿಯಿಲ್ಲ. ಅಧ್ಯಕ್ಷರೆ, ನಾವು ಇದರಿಂದಲೇ ಜೀವನ ಮಾಡಬೇಕು, ಅದಕ್ಕೋಸ್ಕರ ನಾನು ಹೇಳುತ್ತಿರುವುದು, ಇವತ್ತು ನಾನು ಒಂದು ಮದುವೆಗೆ ಹೋಗಿದ್ದೆ, ಒಂದು ಕವರ್ ಬೆಲೆ 10 ರೂಪಾಯಿ, ಆ ಕವರಿನೊಳಗೆ ಹಾಕಿರುವಂಥ ತೆಂಗಿನ ಕಾಯಿಯ ಬೆಲೆ ಎಷ್ಟಪ್ಪ ಎಂದು ಕೇಳಿದರೆ 3 1/2 ರೂಪಾಯಿ. ಮದುವೆಯಲ್ಲಿ ಕೊಟ್ಟಂಥ ತೆಂಗಿನ ಕಾಯಿ ಕವರ್ ಬೆಲೆ 10 ರೂಪಾಯಿ, ಅದರೊಳಗೆ ಹಾಕಿರುವಂಥ, ಅಷ್ಟು ಕಷ್ಟ ಪಟ್ಟು ಬೆಳೆದಂಥ ತೆಂಗಿನ ಕಾಯಿಯ ಬೆಲೆ 3 1/2 ರೂಪಾಯಿ. ಏನಿದು ವಿಪರ್ಯಾಸ? ಎಲ್ಲಿಗೆ ಹೋದರು ರೈತರು?

ಅಧ್ಯಕ್ಷರು : ಅದಕ್ಕೆ ನೀವೇನು ಸೂಚನೆ ಕೊಡುತ್ತಿದ್ದೀರಿ ಹೇಳಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಏನು ಸೂಚನೆ ಕೊಡಬೇಕೆಂದು, ಆ ಮಟ್ಟಕ್ಕೆ ಹೋಗಿದೆ ಪರಿಸ್ಥಿತಿ, ಬೆಳೆಯುವಂಥ ನಮ್ಮ ರೈತರನ್ನು ಕೇಳುವವರು ಇಲ್ಲದಂತಾಗಿದೆ. ರೈತರು ಬೆಳೆದ ಬೆಳೆಗೆ ವೈಜ್ಞಾನಿಕವಾಗಿ, ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳು ಮೊದಲನೇ ಬಾರಿಗೆ, ಶ್ರೀಯುತ ಪುಟ್ಟಣ್ಣಯ್ಯನವರೆಲ್ಲಾ ಬಹಳ ಹೋರಾಟ ಮಾಡಿ ವೈಜ್ಞಾನಿಕ ಬೆಲೆ ಕೊಡಬೇಕು, ನಿಗದಿ ಮಾಡಬೇಕು, ಆಯೋಗವನ್ನು ಮಾಡಬೇಕೆಂದು ಹೇಳುತ್ತಿದ್ದರು. ಸನ್ಮಾನ್ಯ ಮುಖ್ಯಮಂತ್ರಿಗಳು ರಾಜ್ಯಪಾಲರ ಭಾಷಣದಲ್ಲಿ ಪ್ರಥಮ ಬಾರಿಗೆ ಹೇಳಿದ್ದಾರೆ. ಸ್ವಾಗತ ಮಾಡೋಣ. ಯಾವ ರೀತಿ ವೈಜ್ಞಾನಿಕವಾದಂಥ ಬೆಲೆಯನ್ನು ಕೊಡುತ್ತಾರೆ, ಕಾದು ನೋಡೋಣ ನಿಜವಾಗಿಯೂ ವೈಜ್ಞಾನಿಕವಾದ ಬೆಲೆಯನ್ನು ಕೊಡುವುದಾದರೆ ಕೊಡಲಿ.

ಅಧ್ಯಕ್ಷರು : ಗೌಡರೇ, ಅವರು ವೈಜ್ಞಾನಿಕ ಬೆಲೆ ಎಂದು ಹೇಳಿಲ್ಲ, ಲಾಭದಾಯಕ ಬೆಲೆ ಎಂದು ಹೇಳಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಲಾಭದಾಯಕ ಅಂದರೂ ಅದೇ, ವೈಜ್ಞಾನಿಕ ಅಂದರೂ ಅದೇ. ವೈಜ್ಞಾನಿಕವಾಗಿಯಾದರೂ ಕೊಡಿ, ಇಲ್ಲ ಲಾಭದಾಯಕವಾಗಿಯಾದರೂ ಕೊಡಿ. ಯಾವುದೋ ಒಂದು ನಿರ್ಧಾರ ಮಾಡಿ. ಒಟ್ಟಿನಲ್ಲಿ ನಿರ್ಧಾರ ಮಾಡಿ ನಮಗೆ ಲಾಭ ಬರುವಂತೆ ಕೊಡಿ. ವೈಜ್ಞಾನಿಕ ಎನ್ನುವುದಕ್ಕಿಂತ ಲಾಭದಾಯಕವಾಗಿಯೇ ಕೊಡಿ.

ಶ್ರೀ ಹೆಚ್.ಡಿ.ರೇವಣ್ಣ : ಕವರಿನ ರೇಟ್ ಕೊಡಿ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಹೌದು, ಕವರಿನ ರೇಟ್ ಕೊಡಿ. ಕವರೊಳಗೆ ಹಾಕಿರುವ ಕಾಯಿಯ ರೇಟ್ ಬೇಡ. ಕಾಯಿಯ ಬೆಲೆ 3 1/2 ರೂಪಾಯಿ. ಅದೇ ನಿಂಬೆಹಣ್ಣು 10 ರೂಪಾಯಿ. ಅದೇ ತೆಂಗಿನ ಕಾಯಿ 3 1/2, 4 ರೂಪಾಯಿ ಅಂದರೆ ನಮ್ಮ ಪರಿಸ್ಥಿತಿ ಏನು? ನಿಂಬೆ ಹಣ್ಣು ಬೆಳೆಯುವುದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ? ತೆಂಗಿನ ಕಾಯಿ ಬೆಳೆಯುವುದಕ್ಕೆ ಎಷ್ಟು ದುಡ್ಡು ಖರ್ಚಾಗುತ್ತದೆ?

ಶ್ರೀ ಹೆಚ್.ಡಿ.ರೇವಣ್ಣ : ನಿಂಬೆ ಹಣ್ಣು ಯಾವ ಯಾವ ಕಾರ್ಯಕ್ಕೆ ಬೇಕಾಗುತ್ತದೆಂದು ಕೆ.ಎಂ.ಶಿವಲಿಂಗೇಗೌಡರು ಹೇಳಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಈ ಪರಿಸ್ಥಿತಿಗೆ ರೈತ ತಲುಪಿದ್ದಾನೆ. ಆದ್ದರಿಂದ ನಾನು ಹೇಳುತ್ತಿರುವಂಥದ್ದು, ದಯಮಾಡಿ ಇದನ್ನು ಸರ್ಕಾರ ದೊಡ್ಡ ಮನಸ್ಸು ಮಾಡಿ, ಶ್ರೀಯುತ ಜಯಚಂದ್ರರವರು ತೆಂಗಿನ ಬೆಳೆ ಬಗ್ಗೆ Public Accounts Committee ಮುಂದೆ ಕುಳಿತಾಗ ಬಹಳ ಸಾರಿ ಹೇಳುತ್ತಿದ್ದರು, ಈಗ ದೇವರು ನಿಮಗೆ ಅಧಿಕಾರ ಕೊಟ್ಟಿದ್ದಾನೆ. ತೆಗೆದುಕೊಳ್ಳಿ, ಅದು ಏನು ಮಾಡುತ್ತೀರೋ ಮಾಡಿ. ಮಾಡಿ, ಇದರಿಂದ ಸಿದ್ಧ ವಸ್ತುಗಳನ್ನು ತಯಾರು ಮಾಡಿ ಹೊರ ದೇಶಕ್ಕೆ ರಫ್ತು ಮಾಡುವ ಒಂದು ಕೆಲವಷ್ಟು ಪದಾರ್ಥಗಳನ್ನು ಕಂಡು ಹಿಡಿಯುವಂಥ ಪ್ರಾಮಾಣಿಕ ಪ್ರಯತ್ನ ಕೂಡ ಇದರಲ್ಲಿ ಆಗಬೇಕಾಗಿದೆ. ನಮ್ಮ ಅಧ್ಯಕ್ಷರು ಬೆಲ್ ಹೊಡೆಯುತ್ತಿದ್ದಾರೆ. ನಾವು ಇನ್ನೂ ಕೆಲವು ಸೂಚನೆ, ಸಲಹೆಗಳನ್ನು ನಮ್ಮ ಕಷ್ಟಗಳನ್ನು ತೋಡಿಕೊಳ್ಳೋಣವೆಂದು ಹೇಳಿ ಅಂದುಕೊಂಡಿದ್ದೆವು. ನಮ್ಮ ಇನ್ನೂ ಅನೇಕ ಜನ ಸ್ನೇಹಿತರು ಮಾತನಾಡುವವರಿದ್ದಾರೆ. ನಿನ್ನೆಯಲ್ಲಾ ಬಹಳ ಫ್ರೀಡಂ ಆಗಿ ಟೈಮ್ ಕೊಟ್ಟಿದ್ದಿರಿ. ಆದರೆ, ಇವತ್ತು ಯಾಕೋ ಹೀಗೆ ಗೊತ್ತಿಲ್ಲ.

ಅಧ್ಯಕ್ಷರು : 01.30 ಗಂಟೆಗೆ ಮುಗಿಸಬೇಕು.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಆಯಿತು ಮಾನ್ಯ ಅಧ್ಯಕ್ಷರೆ, ಈ ತೆಂಗಿನಲ್ಲಿ ಇನ್ನಷ್ಟು ಪದಾರ್ಥಗಳನ್ನು, ತೆಂಗಿನ ಉಪ ವಸ್ತುಗಳಿಂದ ತಯಾರು ಮಾಡಬಹುದು. ತೆಂಗಿನ ಚಿಪ್ಪಿನಿಂದ ಕಲ್ಲಿದ್ದಲ್ಲನ್ನು ತಯಾರು ಮಾಡಿ ಹೊರ ದೇಶಕ್ಕೆ ರಫ್ತು ಮಾಡಬಹುದು. ಅದಕ್ಕೆ ನೀವು ಆದ್ಯತೆ ಕೊಡಬೇಕು. ತೆಂಗಿನ ನಾರಿನಿಂದ ಪದಾರ್ಥಗಳನ್ನು ತಯಾರು ಮಾಡುವ ಘಟಕಗಳನ್ನು ಸರ್ಕಾರ ಈಗ ಮುಚ್ಚಿದೆ. ಅದಕ್ಕೆ ಮಾನ್ಯತೆ ಕೊಡುತ್ತಿಲ್ಲ. ಅದಕ್ಕೆ ಇರುವ ಬದ್ಧತೆಯನ್ನು ಪ್ರಶ್ನೆ ಮಾಡುತ್ತಿಲ್ಲ. ಅದಕ್ಕೆ ಇರುವ ಘನತೆಯನ್ನು ಸರ್ಕಾರ ಕೊಡುತ್ತಿಲ್ಲ. Coir ನಿಂದ ತಯಾರು ಮಾಡುವ ಅನೇಕ ವಸ್ತುಗಳೇನಿವೆ, ಅವುಗಳಿಗೆ ಹೊರದೇಶಗಳಲ್ಲಿ ನಿಜವಾದ ಬೇಡಿಕೆ ಇರುವುದನ್ನು ನಾನು ಕೇಳಿದ್ದೇನೆ. ಅದಕ್ಕೂ ಹೆಚ್ಚಿನ ರೀತಿಯಲ್ಲಿ ಮಾರುಕಟ್ಟೆ ವ್ಯವಸ್ಥೆಯನ್ನು ಕಂಡುಹಿಡಿಯಬೇಕು. ಇದರ ಜೊತೆಗೆ ಎಲ್ಲಾ ಕಡೆ gas ಬಳಕೆಯಿಂದಾಗಿ, ಇಂದು ಎಡೆಮಟ್ಟೆಯನ್ನೂ ಕೇಳುವವರಿಲ್ಲ. ಗ್ಯಾಸ್‌ನಲ್ಲಿ ಅಡಿಗೆ ಮಾಡುವುದರಿಂದ ಎಡೆಮಟ್ಟೆಯನ್ನು ಕತ್ತರಿಸುವವರೂ ಇಲ್ಲ. ಹೋಗಲಿ ಪುಕ್ಕಟೆಯಾಗಿ ಕತ್ತರಿಸಿಕೊಂಡು ಹೋಗಿ ಎಂದರೂ ಯಾರೂ ತೆಗೆದುಕೊಂಡು ಹೋಗುವುದಿಲ್ಲ. ಇಂತಹ ಪರಿಸ್ಥಿತಿ

ತೆಂಗಿನ ಬೆಳೆಗೆ ಬಂದಿದೆ. ಈ ರೀತಿ ಅನೇಕ ಕೆಲಸಗಳನ್ನು ಮಾಡಿಕೊಡಬೇಕು. pumpsetಗಳಿಗೆ ವಿದ್ಯುಚ್ಛಕ್ತಿಯನ್ನು ಪ್ರಮಾಣದಲ್ಲಿ ಕೊಡದಿದ್ದರೆ ತಗ್ಗು ಪ್ರದೇಶಗಳಲ್ಲಿರುವ ತೆಂಗಿನ ಮರಗಳು ಸುಳಿ ಬಿದ್ದು ಹೋಗುತ್ತವೆ. ಇಂದು ನೀರಾವರಿ ಆಧಾರಿತ ತೆಂಗಿನ ಬೆಳೆ ಬೆಳೆಯುವಂತಹ ಪ್ರದೇಶ ಒಂದು ಕಡೆ ಇದೆ. Natural ಆಗಿ ಏನಿತ್ತೋ ಅದರಲ್ಲಿಯೇ ನೀರು ಬರುತ್ತಿದೆ. ಆ ನೀರನ್ನು ಕೊಡದಿದ್ದರೆ ಅವೂ ಸಹಿತ ಬಿದ್ದು ಹೋಗುತ್ತವೆ, ತೆಂಗಿನ ಸುಳಿ. ಅದಕ್ಕೋಸ್ಕರ ಆ ಬೆಳೆ Loss ಆದರೆ ಅದರಿಂದ ಎಷ್ಟು ಸಾವಿರ ಕೋಟಿ ರೂ. ಸರ್ಕಾರಕ್ಕೆ ಬರುವ ಆದಾಯ ಹೋಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡು, ರೈತರ ಬದುಕನ್ನೂ ಗಮನದಲ್ಲಿಟ್ಟುಕೊಂಡು ದಯಮಾಡಿ ಅವರಿಗೆ ಹೆಚ್ಚಿನ ರೀತಿಯ ಉತ್ತೇಜನ ಕೊಟ್ಟು ಅತಿ ಶೀಘ್ರದಲ್ಲಿ ಬೆಂಬಲ ಬೆಲೆಯನ್ನು ಘೋಷಣೆ ಮಾಡಿ. ಸನ್ಮಾನ್ಯ ಸಚಿವರಾದ ಶಿವಶಂಕರಪ್ಪ ರವರು ಸದನದಲ್ಲಿಯೇ ಇದ್ದಾರೆ. ಅವರ ಭಾಗದಲ್ಲಿಯೂ ಸಹ ತೆಂಗಿನ ಬೆಳೆ ಬೆಳೆಯುತ್ತಾರೆ. ನಾನು ನೋಡಿದ್ದೇನೆ. ದಯಮಾಡಿ ಕೊಬ್ಬರಿಯನ್ನು ಮಾರುಕಟ್ಟೆಯಲ್ಲಿ NAFEDನಲ್ಲಿ ಖರೀದಿ ಮಾಡುವ ಪ್ರಾಮಾಣಿಕ ಪ್ರಯತ್ನಕ್ಕೆ ನಾಳೆಯಿಂದಲೇ ಸರ್ಕಾರ ಮನಸ್ಸು ಮಾಡಬೇಕೆಂದು ಹೇಳಿ, ಧನ್ಯವಾದಗಳನ್ನರ್ಪಿಸಿ, ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು : ವಿರೋಧ ಪಕ್ಷದ ನಾಯಕರು.

ಶ್ರೀ ಸಿ.ಎನ್.ಬಾಲಕೃಷ್ಣ (ಶ್ರವಣಬೆಳಗೊಳ) : ಮಾನ್ಯ ಅಧ್ಯಕ್ಷರೆ, ರಾಜ್ಯ–ದಲ್ಲಿ ತೆಂಗಿನ ಬೆಳೆಗಾರರು ಸಂಕಷ್ಟದಲ್ಲಿದ್ದಾರೆ. ನಮ್ಮ ಭಾಗದಲ್ಲಿ ಕಲ್ಪವೃಕ್ಷ ಹಾಗೂ ಕಾಮಧೇನುವನ್ನೇ ನಂಬಿ ಜೀವನ ಮಾಡುವ ಜನರಿರುವ ಈ ಸಂದರ್ಭದಲ್ಲಿ ಕೊಬ್ಬರಿ ಬೆಲೆ ತೀವ್ರ ಕುಸಿತವನ್ನು ಕಂಡಿದೆ. 8 ಸಾವಿರ ರೂ.ಗಳಿಂದ ಮಾರುಕಟ್ಟೆಯಲ್ಲಿ ರೂ. 4,500/– ಕ್ಕೆ ಇಳಿದಿದೆ. ಮಾರ್ಚ್‌ನಿಂದ ಹಿಂದಕ್ಕೆ NAFED ಮೂಲಕ ಕ್ವಿಂಟಾಲ್‌ಗೆ 5,350 ರೂ.ಗಳಿಗೆ ಖರೀದಿ ಮಾಡುವ ಪ್ರಕ್ರಿಯೆಯನ್ನು ಕೇವಲ ಮೂರು ತಿಂಗಳು ಮಾಡಿದರು. ರಾಜ್ಯ ಸರ್ಕಾರದಿಂದ ಕೇವಲ 700/–ರೂ. ಸಹಾಯಧನವನ್ನು ಕೊಡುವುದಕ್ಕೆ ಅವಕಾಶವಾಗಿ 6,050 ರೂ.ಗಳನ್ನು ನೀಡಲಾಗಿದೆ. ಮಾರ್ಚ್ ತಿಂಗಳಿನಿಂದ ಈಚೆಗೆ ಕೇಂದ್ರ ಸರ್ಕಾರ NAFED ಮೂಲಕ ರೂ.5,500/– ರಲ್ಲಿ ಖರೀದಿ ಮಾಡಲು ಸೂಚನೆಯನ್ನು ನೀಡಿದ್ದಾರೆ. ಇವತ್ತು ಅಂತರ್ಜಲ ಕುಸಿದಿದೆ. ತೇವಾಂಶದ ಸಮಸ್ಯೆಯಿಂದ ಕೊಬ್ಬರಿ ಇಳುವರಿ ಕೂಡ ಕಡಿಮೆಯಾಗಿದೆ. ಹಿಂದೆ

ಪೂರ್ವಿಕರು ವಾಡಿಕೆಯಂತೆ ಒಂದು ಹೆಕ್ಟೇರಿಗೆ ನೂರು ತೆಂಗಿನ ಸಸಿಗಳನ್ನು ನೆಡಲು ಅವಕಾಶ ಮಾಡಿಕೊಟ್ಟಿದ್ದಾರೆ. ಇತ್ತೀಚಿನ ದಿನಗಳಲ್ಲಿ ಒಂದು ಹೆಕ್ಟೇರಿಗೆ 140 ಗಿಡಗಳನ್ನು ನೆಡುವುದಕ್ಕೆ ಅವಕಾಶವಾಗಿದೆ. ಇಂದು ಮಾನ್ಯ ಸಚಿವರು ಕೊಟ್ಟಿರುವ ಉತ್ತರದಲ್ಲಿ ತಮಿಳುನಾಡಿನಲ್ಲಿ ಒಂದು ಹೆಕ್ಟೇರಿಗೆ 14 ಸಾವಿರ ತೆಂಗಿನ ಕಾಯಿಗಳ ಫಸಲನ್ನು ತೆಗೆದುಕೊಳ್ಳುತ್ತಾರೆಂದು ಇದೆ. ಅದೇ ರೀತಿ ಕರ್ನಾಟಕ ರಾಜ್ಯದಲ್ಲಿಯೂ ಒಂದು ಹೆಕ್ಟೇರಿಗೆ 11 ಸಾವಿರ ತೆಂಗಿನ ಕಾಯಿಗಳನ್ನು ಪಡೆದುಕೊಳ್ಳುತ್ತೇವೆಂಬ ಮಾಹಿತಿಯನ್ನು ನಮಗೆ ಉತ್ತರದಲ್ಲಿ ನೀಡಿದ್ದಾರೆ. ಇವತ್ತಿನ ಅಂತರ್ಜಲ ಸಮಸ್ಯೆ ಪರಿಸ್ಥಿತಿಯಲ್ಲಿ ನಾನೊಬ್ಬ ರೈತನಾಗಿ ತಿಳಿಸುವುದಿಷ್ಟೇ ಇವತ್ತು 100 ತೆಂಗಿನ ಮರಗಳಲ್ಲಿ ಕೇವಲ 5–6 ಸಾವಿರ ತೆಂಗಿನ ಕಾಯಿಗಳನ್ನು ಪಡೆದುಕೊಳ್ಳುವುದಕ್ಕೆ ಕೂಡ ತುಂಬಾ ಕಷ್ಟದಾಯಕವಾದ ಪರಿಸ್ಥಿತಿ ಇದೆ. ಇವತ್ತು ಒಂದು ಕ್ವಿಂಟಾಲ್ ಕೊಬ್ಬರಿಯನ್ನು ತಯಾರು ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವ ಸಂದರ್ಭಕ್ಕೆ, ಬಲಿತ ತೆಂಗಿನ ಕಾಯಿಗಳನ್ನು ಸುಮಾರು 300 ದಿನಗಳ ಕಾಲ ಸಂಸ್ಕರಣೆ ಮಾಡಿದರೆ ಅದು ಕೊಬ್ಬರಿಯಾಗಿ ಪರಿವರ್ತನೆಯಾಗುತ್ತದೆ. ಈ ಹಿಂದೆ ಒಂದು ಸಾವಿರ ತೆಂಗಿನ ಕಾಯಿಗೆ ಒಂದು ಕ್ವಿಂಟಾಲ್ 70 ಕೆ.ಜಿ. ಕೊಬ್ಬರಿ ಬರಲು ಅವಕಾಶವಿತ್ತು. ಆದರೆ, ಇವತ್ತು ಅಂತರ್ಜಲ ಸಮಸ್ಯೆ, ನುಸಿ ಪೀಡೆ ತೊಂದರೆ ಇಂತಹ ಹಲವಾರು ಕಾರಣಗಳಿಂದ ಕೇವಲ 120 ಕೆ.ಜಿ. ಕೊಬ್ಬರಿಯನ್ನು ಪಡೆದುಕೊಳ್ಳುವುದಕ್ಕೆ ಮಾತ್ರ ಅವಕಾಶವಿದೆ. ಒಂದು ಸಾವಿರ ತೆಂಗಿನ ಕಾಯಿಗಳನ್ನು ಸಂಸ್ಕರಣೆ ಮಾಡಿ, ಅವು ಬಲಿತ ಮೇಲೆ ಕೊಬ್ಬರಿಯಾಗಿ ಪರಿವರ್ತನೆ ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಹೋಗುವ ಸಂದರ್ಭದಲ್ಲಿ ಸುಮಾರು 2,500/– ದಿಂದ 3,000/– ರೂ.ಆ ವರ್ಷ ಖರ್ಚಾಗುತ್ತದೆ. ಇಂತಹ ಸಂದರ್ಭದಲ್ಲಿ ರಾಜ್ಯ ಸರ್ಕಾರ 2011–12 ನೇ ಸಾಲಿನಲ್ಲಿ ತೋಟಗಾರಿಕೆ ಬೆಳೆಗಳಿಗೆ ಆದಂತಹ ನಷ್ಟದ ಬಗ್ಗೆ ಕೇಂದ್ರ ಸರ್ಕಾರಕ್ಕೆ ರೂ. 321 ಕೋಟಿ ಪ್ರಸ್ತಾವನೆ ಕಳುಹಿಸಿದೆ ಎಂಬ ಉತ್ತರವನ್ನು ನೀಡಲಾಗಿದೆ. ಇದುವರೆಗೆ ತೆಂಗಿನ ಬೆಳೆಗಾರರಿಗೆ ಯಾವುದೇ ಒಂದು ಕಷ್ಟಕ್ಕೂ ಸಹಕರಿಸುವ ಕೆಲಸ ಸರ್ಕಾರಗಳಿಂದ ಆಗಿಲ್ಲ ಎಂದು ಹೇಳಬೇಕಾಗುತ್ತದೆ. ಇವತ್ತು ಒಂದು ತೆಂಗಿನ ಮರವನ್ನು ಬೆಳೆಸಲು 8 ವರ್ಷಗಳ ಕಾಲ ಸುಮಾರು 10 ಸಾವಿರ ರೂ.ಖರ್ಚು ಬರುತ್ತದೆ. ನಮ್ಮ ಭಾಗದಲ್ಲಿ 100 ಕ್ಕೆ 30 ಭಾಗ ತೆಂಗಿನ ಮರಗಳು ಸುಳಿ ಉರುಳಿ ಜನರು ನಗರ ಪ್ರದೇಶಗಳಿಗೆ ಗುಳೆ

ಹೋಗುವ ಸಂದರ್ಭ ಒದಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಚನ್ನರಾಯಪಟ್ಟಣದ ತಾಲ್ಲೂಕಿನ ಬಾಗೂರು ಸುರಂಗನವಿಲೆ, ಬಹುಶಃ ಕಾನೂನು ಸಚಿವರು ತುಮಕೂರು ಜಿಲ್ಲೆಯವರಾಗಿ–ರುವುದರಿಂದ ನಾವು ಎದೆ ಬಗೆದು ತುಮಕೂರು, ಮಂಡ್ಯ ಜಿಲ್ಲೆಗೆ ನೀರನ್ನು ಕೊಟ್ಟಿದ್ದೇವೆ. ನಾವು ಸಂಕಷ್ಟದ ಹಾದಿಗೆ ಇಳಿಯುವ ಪರಿಸ್ಥಿತಿ ನಿರ್ಮಾಣವಾಗಿದೆ. ಬಹುತೇಕ ಕಲ್ಪವೃಕ್ಷ/ಕಾಮಧೇನುವನ್ನು ನಂಬಿ ಜೀವನ ಮಾಡುವ ಜನರಿರುವ ಕಡೆ ಒಂದು ಕಡೆ ಡೈರಿ development, ನಿಂದ ನಮ್ಮ ಮಾಜಿ ಸಚಿವರಾದ ಶ್ರೀ ರೇವಣ್ಣ ರವರ ಸಹಕಾರದಿಂದ ಜೀವನ ನಡೆಸಲು ನಮ್ಮಲ್ಲಿ ಅವಕಾಶವಾಗಿದೆ.

ಅಧ್ಯಕ್ಷರು : ತೆಂಗಿನ ಕಾಯಿಗೆ ಬನ್ನಿ.

ಶ್ರೀ ಸಿ.ಎನ್.ಬಾಲಕೃಷ್ಣ : ತೆಂಗಿನ ಮರವನ್ನು ನಂಬಿದವರೆಲ್ಲರ ಪರಿಸ್ಥಿತಿ ಬಿಗಡಾಯಿಸಿ ಇಂದು ಕಷ್ಟದ ಹಾದಿಯಲ್ಲಿ ನಡೆಯುವ ಪರಿಸ್ಥಿತಿಯಾಗಿರುವ ಈ ಸಂದರ್ಭದಲ್ಲಿ ಕೇಂದ್ರ ಸರ್ಕಾರ ರೂ.5,500/–ಕ್ಕೆ NAFED ಮೂಲಕ ಖರೀದಿ ಮಾಡಲು ಸೂಚನೆ ನೀಡಿದೆ, ಅದಕ್ಕೆ ಪೂರಕವಾಗಿ ರಾಜ್ಯ ಸರ್ಕಾರ ಕಡಿಮೆ ಎಂದರೂ ಕೂಡ ಎರಡೂವರೆ ಸಾವಿರ ಸಹಾಯ ಧನವನ್ನು supporting ಆಗಿ ಕೊಡುವ ಮೂಲಕ ರೈತರ ಬದುಕಿಗೆ ಹತ್ತಿರವಾಗಿ ರೈತರು ಉತ್ತಮವಾದ ರೀತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಜೀವನ ನಡೆಸಲು ಅವಕಾಶ ಮಾಡಿಕೊಡಬೇಕೆಂದು ಮಾನ್ಯ ಅಧ್ಯಕ್ಷರಲ್ಲಿ ಮನವಿಯನ್ನು ಮಾಡುತ್ತೇನೆ. ಮಾರ್ಚ್ ತಿಂಗಳಿನಿಂದ ಹಿಂದೆ ಕೇವಲ 3 ತಿಂಗಳು ಮಾತ್ರ NAFED ಸಹಕಾರಿ ಮಹಾಮಂಡಳದ federation ಮೂಲಕ ಖರೀದಿಯನ್ನು ಮಾಡಿದರು. ಈಗೇನು 12ನೇ ತಾರೀಖಿನಿಂದ ಖರೀದಿ ಮಾಡುವುದಕ್ಕೆ ಸೂಚನೆ ನೀಡಿದ್ದೇವೆಂದು ಉತ್ತರದಲ್ಲಿ ಹೇಳಿದ್ದಾರೆ. ಅದು ಜರೂರಾಗಿ ಪ್ರಾರಂಭವಾಗಿ ಪ್ರತಿ ಕ್ವಿಂಟಾಲ್‌ಗೆ ಕಡ್ಡಾಯವಾಗಿ 2,500/– ರೂ.ಗಳನ್ನು ಸಹಾಯ ಧನವನ್ನು ನೀಡಲೇಬೇಕು. ಅದೇ ರೀತಿ ಸುಳಿ ಉರುಳಿರುವ ತೆಂಗಿನ ಮರಗಳಿಗೆ ಪ್ರತಿ ಮರಕ್ಕೆ ರೂ.10 ಸಾವಿರ ಪರಿಹಾರ ಧನವನ್ನು ಸರ್ಕಾರ ಘೋಷಣೆ ಮಾಡಬೇಕೆಂದು ಮನವಿ ಮಾಡುತ್ತೇನೆ. ಅದರ ಜೊತೆಗೆ ಗೌರವಾನ್ವಿತ ತೋಟಗಾರಿಕಾ ಸಚಿವರು ಈ ಭಾಗಗಳಿಗೆ ಭೇಟಿ ನೀಡಿ, ಅದರ ಜೊತೆಗೆ ಭಾರಿ ನೀರಾವರಿ ಸಚಿವರು ಸದನದಲ್ಲಿರುವ ಈ ಸಂದರ್ಭದಲ್ಲಿ ನಮ್ಮಲ್ಲಿ lift

irrigation ಗಳಿಗೆ ಏನು ಆಡಳಿತಾತ್ಮಕ ಮಂಜೂರಾತಿ ಆಗದೇ ಇನ್ನೂ ಕೂಡ ತಡವಾಗಿರುವ ಸಂದರ್ಭದಲ್ಲಿ ಅವುಗಳಿಗೆ ಮಂಜೂರಾತಿ ಮಾಡಿಸಿಕೊಡುವ ಮೂಲಕ ರೈತರಿಗೆ ಅನುಕೂಲವಾಗುವ ಕಾರ್ಯಕ್ರಮಗಳನ್ನು ಬೇಗ ಮಾಡಿಕೊಡಬೇಕೆಂದು ಮನವಿ ಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೈ.ಎಸ್.ವಿ.ದತ್ತ (ಕಡೂರು) : ಮಾನ್ಯ ಸಭಾಧ್ಯಕ್ಷರೆ, ನಾನು ಈ ವಿಷಯ ಕುರಿತಂತೆ ಹೆಚ್ಚಿಗೆ ಹೇಳಲು ಹೋಗುವುದಿಲ್ಲ. ಮಾನ್ಯ ಸದಸ್ಯರಾದ ಶ್ರೀ ಶಿವಲಿಂಗೇಗೌಡರು ನನ್ನ ಪಕ್ಕದ ಮತಕ್ಷೇತ್ರದವರು. ನನ್ನ ಪಕ್ಕದ ತಾಲ್ಲೂಕಿನವರಾಗಿದ್ದು, ನಾವೆಲ್ಲರೂ ಅಣ್ಣ-ತಮ್ಮಂದಿರಂತೆ ಬಾಳುತ್ತಿರುವ ಒಂದೇ ತಾಲ್ಲೂಕಿನವರು. ಸಂಕಷ್ಟವೆಲ್ಲವನ್ನೂ ಒಟ್ಟೊಟ್ಟಿಗೆ ಹಂಚಿಕೊಂಡು ಬಂದಿದ್ದೇವೆ. ಈ ವಿಷಯ ಕುರಿತು ಈಗಾಗಲೇ ನನ್ನ ಪಕ್ಕದ ಚನ್ನರಾಯಪಟ್ಟಣ ಮತಕ್ಷೇತ್ರದ ಮಾನ್ಯ ಶಾಸಕರಾದ ಶ್ರೀ ಬಾಲಕೃಷ್ಣರವರು ಮಾತನಾಡಿದ್ದಾರೆ. ನನ್ನ ಮುಖ್ಯ ಪ್ರಶ್ನೆಯೇನೆಂದರೆ, ಸರ್ಕಾರದವರು ಉತ್ತರ ಕೊಟ್ಟಿದ್ದಾರೆ. ಸರ್ಕಾರ ಕೊಟ್ಟಿರುವ ಉತ್ತರ ಗಮನಿಸಿದರೆ ನಿಮಗೆ ಅರ್ಥವಾಗಬೇಕು ಸರ್ಕಾರವೇ ಈ ತರಹವಾದರೆ ಸರ್ಕಾರದವರೇ ಹೀಗೆ ಹೇಳಿಕೊಂಡರೆ ತೆಂಗು ಬೆಳೆಯುವ ರೈತರ ಗತಿ ಏನು? ಮಾನ್ಯ ಅಧ್ಯಕ್ಷರೆ, ಸರ್ಕಾರ ನೀಡಿರುವ ಉತ್ತರದ ಕಂಡಿಕೆ 9ರಲ್ಲಿ ಏನು ಹೇಳುತ್ತಾರೆಂದರೆ, *"ದಿನಾಂಕ 18.2.2013ರಂದು ಕೇಂದ್ರ ಸರ್ಕಾರವು ಕ್ವಿಂಟಾಲ್‌ಗೆ ರೂ.5,500/-ಗಳೆಂದು ಘೋಷಿಸಿದ್ದರೂ ಸಹ ಖರೀದಿ ವಹಿವಾಟಿನಲ್ಲಿ ಶೇಕಡ 15ಕ್ಕಿಂತಲೂ ಹೆಚ್ಚಿಗೆ ನಷ್ಟವುಂಟಾದಲ್ಲಿ, ಸದರಿ ನಷ್ಟವನ್ನು ನಾಫೆಡ್ ಸಂಸ್ಥೆಯೇ ಭರಿಸಬೇಕೆಂಬ ಕೇಂದ್ರ ಸರ್ಕಾರದ ನಿಬಂಧನೆ ಕಾರಣದಿಂದ ನಾಫೆಡ್ ಸಂಸ್ಥೆಯು ಬೆಂಬಲ ಬೆಲೆ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದಿಲ್ಲ."* ನೋಡಿ, ತಮಾಷೆ ಹೇಗಿದೆ? ಕೇಂದ್ರ ಸರ್ಕಾರವು ಕ್ವಿಂಟಾಲ್‌ಗೆ ರೂ.5,500/- ಕೊಡುವುದರಿಂದ, ಅದರ ಅಧೀನದಲ್ಲಿ ಬರುವ ಕೇಂದ್ರದ ನಾಫೆಡ್ ಖರೀದಿ ಕೇಂದ್ರವು ಕ್ವಿಂಟಾಲ್‌ಗೆ ರೂ.5,500/- ಅನ್ನು ಕೊಂಡುಕೊಳ್ಳಿ, ಇಲ್ಲವಾದರೆ ಬಿಡಿ, ಹೆಚ್ಚು-ಕಡಿಮೆ ನಷ್ಟವುಂಟಾದಲ್ಲಿ ಮಾತ್ರ ನೀವೇ ತುಂಬಿಕೊಡಬೇಕೆಂದು ಹೇಳಿದ್ದಾರೆ! ನಷ್ಟ ಮಾಡಿಕೊಂಡು ನಾವೇಕೆ ತುಂಬಿಕೊಡಬೇಕೆಂದು ಯೋಚಿಸಿ ಅವರು ಖರೀದಿ ಕೇಂದ್ರವನ್ನೇ ತೆರೆಯಲಿಲ್ಲ. ನಷ್ಟ ಭರಿಸಲು ಕೇಂದ್ರ ಸರ್ಕಾರದ ವ್ಯಾಪ್ತಿಯಡಿ ಖರೀದಿ ಕೇಂದ್ರ ತೆರೆಯಲು ಮುಂದಾಗುವುದಿಲ್ಲವೆಂದರೆ, ಇನ್ನೂ ತೀವ್ರತರವಾಗಿ ಸಂಕಷ್ಟಕ್ಕೀಡಾಗಿರುವ ರೈತ ಇಷ್ಟು ಕಷ್ಟಪಟ್ಟು ಬೆಳೆದ ಬೆಳೆಗೆ ಆತನ

ಸಹಾಯಕ್ಕೆ ಇನ್ಯಾರು ಬರಬೇಕು? ನಷ್ಟ ತುಂಬಿಕೊಡಲು ಖರೀದಿ ಕೇಂದ್ರಗಳನ್ನು ತೆರೆದು ನಾನ್ಯಾಕ್ಕೆ ಸುಟ್ಟುಕೊಳ್ಳಲಿ ಎಂದು ಕೇಂದ್ರ ಸರ್ಕಾರದ ಅಧೀನ ಸಂಸ್ಥೆಯಾದ ನಾಫೆಡ್ ಹೀಗೆ ಕೈ ಚೆಲ್ಲಿ ಕುಳಿತುಕೊಂಡರೆ ಹೇಗೆ. ಹಾಗಾದರೆ, ರೈತರ ಪರಿಸ್ಥಿತಿ ಏನಾಗುತ್ತದೆ ಎಂಬುದನ್ನು ಅರ್ಥಮಾಡಿಕೊಳ್ಳಬೇಕಾಗುತ್ತದೆ.

ವಿಶೇಷವಾಗಿ, ನನ್ನ ಮತಕ್ಷೇತ್ರವಾದ ಕಡೂರಿನಲ್ಲಿ, ಅದು ಅಪ್ಪಟ ಬಯಲುಸೀಮೆ ಕ್ಷೇತ್ರವಾಗಿದ್ದು, ಮೂರು ವರ್ಷಗಳಿಂದ ಸತತವಾಗಿ ಬರಗಾಲಕ್ಕೆ ತುತ್ತಾಗಿದೆ. ಒಂದು ಹನಿ ಮಳೆಯೂ ಬಿದ್ದಿಲ್ಲ. ಈಗ ಒಂಚೂರು ಪುಣ್ಯವೆಂಬಂತೆ ಎರಡು ಸಲ ಹದವಾದ ಮಳೆ ಬಿದ್ದಿದೆ. *'ದತ್ತಣ್ಣ ಗೆದ್ದ ನಂತರ ಸ್ವಲ್ಪ ಮಳೆ ಬಂತು'* ಎಂದು ಅಲ್ಲಿನ ಜನರು ಈಗ ಮಾತನಾಡುಕೊಳ್ಳುತ್ತಿದ್ದಾರೆ! ಹಾಗಾಗಿ, ಈಗ ಅಲ್ಲಿ ಸ್ವಲ್ಪ ಮಳೆಯಾಗುತ್ತಿದೆ.

ಶ್ರೀ ಟಿ.ಬಿ.ಜಯಚಂದ್ರ : ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮಳೆಯಾಗುತ್ತಿದೆ.

ಶ್ರೀ ವೈ.ಎಸ್.ವಿ.ದತ್ತ : ನೀವು ಹಾಗೆ ಹೇಳಿಕೊಳ್ಳಬಹುದು. ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಮಾನ್ಯ ಅಧ್ಯಕ್ಷರೆ, ಕೊಬ್ಬರಿ ವಿಷಯವಾಗಿ ಈಗಾಗಲೇ ನನ್ನ ಮಿತ್ರರು ಹೇಳಿರುವಂತೆ, ನಾಫೆಡ್ ಸಂಸ್ಥೆಯು 12ನೇ ತಾರೀಖಿನಂದು ಖರೀದಿ ಕೇಂದ್ರಗಳನ್ನು ತೆರೆಯುತ್ತಿರುವುದು ನಮಗೆಲ್ಲರಿಗೂ ಬಹಳ ಸಂತೋಷವಾಗಿದೆ. ಅದೇ ರೀತಿ ಬೆಂಬಲ ಬೆಲೆ ಎಷ್ಟೆಂಬುದನ್ನೂ ಸರ್ಕಾರ ಘೋಷಿಸಬೇಕು. ಸರ್ಕಾರದ ಉತ್ತರ ಮುಗುಂ ಆಗಿದೆ. ಕೇಂದ್ರ ಸರ್ಕಾರವು ಕ್ವಿಂಟಾಲ್‌ಗೆ ರೂ.5,500/–ಗಳೆಂದು ಘೋಷಿಸಿದ್ದರೂ, ರಾಜ್ಯ ಸರ್ಕಾರವು ಕರ್ನಾಟಕ ಮಾರಾಟ ಮಹಾ ಮಂಡಳವು ಕೇಂದ್ರ ಸರ್ಕಾರದ ಜೊತೆ ಕೈ ಜೋಡಿಸಿ ಎಷ್ಟು ಪ್ರಮಾಣದಲ್ಲಿ ನಮ್ಮ ರಾಜ್ಯದ ರೈತರ ನೆರವಿಗೆ ಬರುತ್ತದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೇ ವಿನಾ ಮುಗುಂ ಆಗಿ 'ನಾವು ಮಾಡುತ್ತೇವೆ, ತೆರೆಯುತ್ತೇವೆ, ಕೊಡುತ್ತೇವೆ' ಎಂದು ಈ ರೀತಿಯ ಉತ್ತರ ಹೇಳಬಾರದು. ನನ್ನ ಮತಕ್ಷೇತ್ರವಾದ ಕಡೂರಿನ ಕುರಿತು ಹೇಳುವುದಾದರೆ, ಕಡೂರಿನ ರೈತರು ಕೊಬ್ಬರಿ ಮಾರಾಟ ಮಾಡಬೇಕೆಂದರೆ, ಅವರು ಸಾಮಾನ್ಯವಾಗಿ ಏನು ಮಾಡುತ್ತಾರೆಂದರೆ, ನಾಫೆಡ್ ಕೇಂದ್ರವೆಂದರೆ, ಜಯಚಂದ್ರರವರ ಜಿಲ್ಲೆಯಾದ ತಿಪಟೂರಿಗೆ ಹಾಕಿಕೊಂಡು ಬಿಡುತ್ತಾರೆ. ಇಲ್ಲವೇ ಹಾಸನ ಜಿಲ್ಲೆಯವರು ಅರಸೀಕೆರೆಗೆ ಹಾಕಿಕೊಂಡು ಬಿಡುತ್ತಾರೆ. ದತ್ತ

ಕ್ಷೇತ್ರವೆಂದರೆ, ಅಂತೂ ಇಂತೂ ಕುಂತಿ ಮಕ್ಕಳಿಗೆ ರಾಜ್ಯವಿಲ್ಲವೆನ್ನುವಂತೆ ನಮ್ಮ ಕಡೂರು ಕ್ಷೇತ್ರ ಒಂದು ಮೂಲೆಯಲ್ಲಿ ಕುಳಿತುಕೊಂಡಿರುತ್ತದೆ. ಅದಕ್ಕೋಸ್ಕರ, ನಾನು ಕೇಳಿಕೊಳ್ಳುವುದೇನೆಂದರೆ, ನಾಫೆಡ್ ಸಂಸ್ಥೆಯು ಖರೀದಿ ಕೇಂದ್ರಗಳನ್ನು ತೆರೆಯುವುದಾದರೆ, ದಯವಿಟ್ಟು ಬಯಲುಸೀಮೆಯ ರೈತರಿಗೆ ಅನುಕೂಲ ಮಾಡಿಕೊಡಬೇಕೆಂದರೆ, ಅರಸೀಕೆರೆ ಬಳಿ ಬಹಳಷ್ಟು ಎ.ಪಿ.ಎಂ.ಸಿ.ಗಳಿವೆ. ಹಾಗಾಗಿ, ಕಡೂರಿನಲ್ಲಿಯೇ ಖರೀದಿ ಕೇಂದ್ರಗಳನ್ನು ತೆರೆಯಬೇಕೆಂದು ನಾವು ಕೇಳಿದ್ದು. ಖರೀದಿ ಕೇಂದ್ರಗಳನ್ನು ಕಡೂರಿನಲ್ಲಿಯೇ ತೆರೆದರೆ ನಮ್ಮ ತಾಲ್ಲೂಕಿನ ರೈತರು ಅವರ ಮನೆ ಬಾಗಿಲಲ್ಲಿಯೇ ಮಾರಾಟ ಮಾಡಿ ಅಲ್ಪಸ್ವಲ್ಪ ದುಡ್ಡು ತೆಗೆದುಕೊಂಡು ನೆಮ್ಮದಿಯಾಗಿ ಹೋಗುತ್ತಾರೆ. ಬರುವ ದುಡ್ಡು ಕಡಿಮೆ ಇರುವುದರಿಂದ, ಅದನ್ನೇ ಅವರು ನೆಟ್ಟಗೆ ತೆಗೆದುಕೊಂಡು ಹೋಗುವುದಕ್ಕೆ ಸ್ವಲ್ಪ ಅವಕಾಶ ಮಾಡಿಕೊಡಬೇಕೆಂದು ಸರ್ಕಾರದಲ್ಲಿ ಕೇಳಿಕೊಳ್ಳುತ್ತಾ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ.ಟಿ.ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೆ, ನಾವೆಲ್ಲರೂ ತೆಂಗು ಬೆಳೆಯುವ ಭಾಗಗಳಿಂದ ಬಂದಿರುವ ಶಾಸಕರಾಗಿದ್ದೇವೆ. ಶೂನ್ಯ ವೇಳೆಯಲ್ಲಿ ನಮಗೆ ಮಾತನಾಡಲು ತಾವು ಅವಕಾಶ ಕೊಡಲಿಲ್ಲ. ನಮಗೆ ದಯಮಾಡಿ ಅವಕಾಶ ಕೊಡಬೇಕು.

ಅಧ್ಯಕ್ಷರು : ಯಾವ ಮಾನ್ಯ ಸದಸ್ಯರುಗಳು ಸೂಚನಾ ಪತ್ರಕ್ಕೆ ಸಹಿ ಮಾಡಿ ಕಳುಹಿಸಿರುತ್ತಾರೋ, ಅವರುಗಳಿಗೆ ಮಾತ್ರ ಮಾತನಾಡಲು ಅವಕಾಶ ಕಲ್ಪಿಸಿಕೊಡುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ (ಹೊಳೆನರಸೀಪುರ) : ಮಾನ್ಯ ಸಭಾಧ್ಯಕ್ಷರೆ, ಸನ್ಮಾನ್ಯ ಸಚಿವರು ನೀಡಿರುವ ಹೇಳಿಕೆಯಲ್ಲಿ. *'ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು ಒಟ್ಟು 19.00 ಲಕ್ಷ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದ್ದು, ಇದರಲ್ಲಿ ಸುಮಾರು 4,91,337 ಹೆಕ್ಟೇರ್ (52,850 ಲಕ್ಷ ಮಿಲಿಯನ್ ಕಾಯಿಗಳ ಉತ್ಪಾದನೆ) ಪ್ರದೇಶದಲ್ಲಿ ತೆಂಗು ಬೆಳೆಯಾಗುತ್ತಿದೆ'* ಎಂದೂ, ದುರದೃಷ್ಟವೆಂದರೆ, '1,94,830 ಹೆಕ್ಟೇರ್ ತೆಂಗು ಬೆಳೆ ಹಾನಿಯಾಗಿರುತ್ತದೆ. ಅಂದರೆ, 4,91,337 ಹೆಕ್ಟೇರ್ ಪ್ರದೇಶಗಳ ಪೈಕಿ 1,94,830 ಹೆಕ್ಟೇರ್ ಪ್ರದೇಶಗಳಲ್ಲಿ ತೆಂಗು ಬೆಳೆಗೆ ಹಾನಿಯಾಗಿದೆ' ಎಂದು ಮಾಹಿತಿ ನೀಡಿದ್ದಾರೆ. ನಮ್ಮ ಗುರುಗಳಿಂದ ಈ ರೀತಿ ಉತ್ತರ ಕೊಡಿಸಿರುವುದರಿಂದ ನನಗೆ

ಹೊಟ್ಟೆ ಉರಿಯುತ್ತಿದೆ. ಬೇರೆಯವರಿಂದ ಉತ್ತರ ಹೇಳಿಸಿದ್ದರೆ, ಅದು ಬೇರೆ ರೀತಿಯಾಗುತ್ತಿತ್ತು! ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರಾಗಿರುವ ಡಾ: ಶಾಮನೂರು ಶಿವಶಂಕರಪ್ಪನವರು ಹಿರಿಯರಾಗಿದ್ದು, ಅವರ ಬಗ್ಗೆ ನನಗೆ ಗೌರವವಿದೆ. ಅವರಿಂದ ಇಂತಹ ಉತ್ತರ ಹೇಳಿಸಿರುವುದನ್ನು ನೋಡಿದರೆ ಬೇಸರವಾಗುತ್ತದೆ. ರಾಜ್ಯದಲ್ಲಿ ತೆಂಗು ಬೆಳೆಯುತ್ತಿದ್ದ ಶೇಕಡ 30ರಷ್ಟು ಪ್ರದೇಶಗಳು ನಾಶವಾಗಿದ್ದು, ಶೇಕಡ 70ರಷ್ಟು ತೆಂಗು ಪ್ರದೇಶಗಳು ಉಳಿದುಕೊಂಡಿವೆ. ಮಾನ್ಯ ಸದಸ್ಯರಾದ ಶ್ರೀ ಶಿವಲಿಂಗೇಗೌಡರು ಹೇಳಿದಂತೆ ಅವರ ಮತಕ್ಷೇತ್ರದ ಊರಿನಲ್ಲಿ ಮಾತ್ರ ಈ ತರಹದ ಪರಿಸ್ಥಿತಿ ಇರದೆ ನಮ್ಮ ಪ್ರದೇಶಗಳಲ್ಲಿ ನುಸಿರೋಗ ತೆಂಗಿಗೆ ಇದೆ.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಸದಸ್ಯರಾದ ಶ್ರೀ ಶಿವಲಿಂಗೇಗೌಡರು ಒಂದು ಮಾತನ್ನು ಹೇಳಿದರು.ಏನೆಂದರೆ, ನಾವು 10–20 ಶಾಸಕರು ತೆಂಗು ಬೆಳೆಯುವ ಪ್ರದೇಶದಿಂದ ಬಂದಿರುವವರಾಗಿದ್ದು, ಒಂದು ಚೀಲಕ್ಕೆ 10 ರೂ. ತೆಂಗಿನಕಾಯಿಗೆ 3–4 ರೂ., ಅದೇ ರೀತಿ ನಿಂಬೆಹಣ್ಣಿಗೆ 10 ರೂ. ಎಂದು ಹೇಳಿದರು. ಬಹುಶಃ ಇಲ್ಲಿಗೆ ಶಾಸಕರಾಗಿ ಬಂದಿರುವ ಯಾವುದೇ ತೆಂಗು ಬೆಳೆಗಾರರು ಕೂಡ ಜೇಬಿನಲ್ಲಿ ತೆಂಗು ಇಟ್ಟುಕೊಂಟು ಬಂದಿಲ್ಲ. ಬದಲು ಯಾರದಾದರೂ ಜೇಬಿನಲ್ಲಿ ನಿಂಬೆಹಣ್ಣು ಇದ್ದರೆ, ಅದು ರೇವಣ್ಣನವರ ಜೇಬಿನಲ್ಲಿ ಮಾತ್ರ ಇದೆ! ನಿಂಬೆಹಣ್ಣಿಗೆ ಬೆಲೆ ಬರಲು ರೇವಣ್ಣನವರೇ ಕಾರಣ!

ಶ್ರೀ ಹೆಚ್.ಡಿ.ರೇವಣ್ಣ : ಮಾನ್ಯ ಅಧ್ಯಕ್ಷರೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಮಂತ್ರಿಗಳು ಈಗ ಒಂದು ಮಾತು ಹೇಳಿದರು. ಈಗ ಒಂದು ಕೆಲಸ ಮಾಡೋಣ. ಏನೆಂದರೆ, ಎಲ್ಲರೂ ಜೇಬಿನಲ್ಲಿ ನಿಂಬೆಹಣ್ಣು ಇಟ್ಟುಕೊಳ್ಳುವಂತೆ ಒಂದು ಸರ್ಕಾರಿ ಆದೇಶ ಹೊರಡಿಸಲಿ! ಆಗ ಅವರಿಗೆ ಒಂದು ನಿಂಬೆಹಣ್ಣು ಕೊಡಿಸೋಣ. ಅವರಿಗೆ ಏನೂ ತೊಂದರೆಯಾಗಬಾರದು. ಅದಕ್ಕೋಸ್ಕರ, ನಿಂಬೆಹಣ್ಣಿನ ದರ ಏತಕ್ಕೋಸ್ಕರ ಜಾಸ್ತಿಯಾಗಿದೆ? ಮತ್ತು ತೆಂಗಿನಕಾಯಿ ದರ ಏತಕ್ಕೋಸ್ಕರ ಕಡಿಮೆಯಾಯಿತು? ಎಂಬುದನ್ನು ಜಯಚಂದ್ರರವರೇ ಹೇಳಲಿ. ನಿಮಗೆ ನ್ಯಾಯದ ತಕ್ಕಡಿ ಹಿಡಿಯುವ ಸಾಮರ್ಥ್ಯವಿದೆ. ನೀವು ಹೇಳಿದರೆ ನಾವು ಒಪ್ಪಿಕೊಳ್ಳುತ್ತೇವೆ. ಸುಮ್ಮನೆ ಚರ್ಚೆ ಬೇಡ. ತೆಂಗಿನಕಾಯಿಯನ್ನು ದೇವರಿಗೆ ಒಡೆದರೆ ನಿಂಬೆಹಣ್ಣನ್ನು ಯಾರಿಗೆ ಒಡೆಯುತ್ತಾರೆ?

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ : ನಿಂಬೆಹಣ್ಣಿನ ಬೆಲೆ ಏಕೆ ಜಾಸ್ತಿಯಾಯಿತು ಎಂದರೆ, ವಾಮಾಚಾರ ಹೆಚ್ಚಾಯಿತು. ಅದಕ್ಕೋಸ್ಕರ, ನಿಂಬೆಹಣ್ಣಿನ ದರವೂ ಜಾಸ್ತಿಯಾಯಿತು.

ಶ್ರೀ ಹೆಚ್.ಡಿ.ರೇವಣ್ಣ : ರಾಜ್ಯದಲ್ಲಿ ತೆಂಗು ಬೆಳೆಯುತ್ತಿದ್ದ ಪ್ರದೇಶಗಳ ಪೈಕಿ ಶೇಕಡ 30ರಷ್ಟು ಪ್ರದೇಶಗಳು ಸಂಪೂರ್ಣವಾಗಿ ನಾಶವಾಗುತ್ತಿದೆ. ಇವತ್ತು ಕೇಂದ್ರ ಸರ್ಕಾರದಲ್ಲಿ ಕೃಷಿ ಸಚಿವರಾಗಿರುವ ಶ್ರೀ ಶರದ್ ಪವಾರ್‌ರವರು ರೈತರ ಪರವಾಗಿರುವುದರಿಂದ ಅವರ ಬಗ್ಗೆ ನನಗೆ ಗೌರವವಿದೆ. ಅವರ ಗಮನಕ್ಕೆ ಈ ವಿಷಯ ತರಬೇಕಾಗುತ್ತದೆ. ಇಡೀ ದೇಶದಲ್ಲಿ ಹೆಚ್ಚು ಪ್ರಮಾಣದಲ್ಲಿ ತೆಂಗು ಬೆಳೆಯುವ ರಾಜ್ಯಗಳ ಪೈಕಿ ಕರ್ನಾಟಕವು 3ನೇ ಸ್ಥಾನದಲ್ಲಿದೆ. ತೆಂಗಿನಕಾಯಿಯನ್ನು ಎಲ್ಲ ಉದ್ದೇಶಗಳಿಗೂ ಉಪಯೋಗಿಸಲಾಗುತ್ತದೆ. ಮಾನ್ಯ ಸದಸ್ಯರಾದ ಶ್ರೀ ಶಿವಲಿಂಗೇಗೌಡರು ಮಾತನಾಡುತ್ತಾ, ತೆಂಗಿನಕಾಯಿ ಚೀಲಕ್ಕೆ 10 ರೂ. ಆದರೆ ತೆಂಗಿನ ಕಾಯಿಗೆ ರೂ. 3.50ರಿಂದ 4ರೂ. ಆಗುತ್ತದೆಂದರು! ಬೇರೆ ಪದಾರ್ಥವಾದ ಎಳನೀರು 15 ರೂ. ಇದ್ದರೆ, ನಾವು ಮಾರಾಟ ಮಾಡುವ ತೆಂಗಿನಕಾಯಿಗೆ 4ರೂ., 5ರೂ. ಕೊಡುತ್ತೇವೆ.

ಶ್ರೀ ಕೆ.ಆರ್.ರಮೇಶ್‌ಕುಮಾರ್ : ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಕುಳಿತು ಕಲಾಪಗಳನ್ನು ಗಮನಿಸುತ್ತಿರುತ್ತೇವೆ. ದುರದೃಷ್ಟವಶಾತ್, ಈ ಸದನದಲ್ಲಿ ತಮಗೂ ಬಹಳ ಅನುಭವವಾಗಿದೆ. ತೆಂಗು, ಟೊಮ್ಯಾಟೊ, ವಿದ್ಯುಚ್ಛಕ್ತಿ, ಇಲ್ಲವೇ ಕುಡಿಯುವ ನೀರಿನ ವಿಷಯಗಳಾಗಿರಬಹುದು. ಯಾವುದೇ ವಿಚಾರಗಳು ಪ್ರಸ್ತಾಪವಾದಾಗಲೂ ನಮ್ಮ ವಿಧಾನ ಸಭೆಯ ಈ ವೇದಿಕೆ ಏನಿದೆ, ಯಾವ ದಿಕ್ಕಿನಲ್ಲಿ, ಅರ್ಥದಲ್ಲಿ ಕೆಲಸ ಮಾಡಬೇಕೋ ಆ ದಿಕ್ಕಿನಲ್ಲಿ ಕೆಲಸ ಮಾಡುವುದಕ್ಕಾಗುತ್ತಿಲ್ಲ. ಬೇರೆ ಕಾರಣಗಳಿಂದಾಗಿ ಕೆಲವರು ಕೆಲವು ದಿವಸ ಅತ್ತ ಕಡೆ ಕುಳಿತುಕೊಳ್ಳುತ್ತಾರೆ, ಕೆಲವರು ಕೆಲವು ದಿವಸ ಇತ್ತ ಕಡೆ ಕುಳಿತುಕೊಳ್ಳುತ್ತಾರೆ. ಅತ್ತ ಕಡೆ ಕುಳಿತ ಕೆಲವರು ಕೆಲವು ವಿಷಯ ಪ್ರಸ್ತಾಪಿಸಿದರೆ ಅದಕ್ಕೆ ಇತ್ತ ಕಡೆ ಕುಳಿತವರು ಒಂದು ಹೇಳಿಕೆ ಓದುತ್ತಾರೆ. ಇದಕ್ಕೆ ಏನು ಮಾಡಬೇಕು?

Administration ಗೆ ಮತ್ತು Governance ಗೆ, ಆಡಳಿತ ಮತ್ತು ಪರಿಪಾಲನೆಗೆ ಬಹಳ ದೊಡ್ಡ ವ್ಯತ್ಯಾಸವಿದೆ. ನಾವು Policy makers.ನಾವು ಜನರ ಮಧ್ಯದಿಂದ ಇಲ್ಲಿಗೆ ಬಂದಿರತಕ್ಕವರು. ಜನರ ನೋವನ್ನು ಅರ್ಥ ಮಾಡಿಕೊಳ್ಳುವಾಗ, ಬಿಂಬಿಸುವಾಗ ನಮ್ಮ ಯಾರ ಮಧ್ಯೆಯೂ ಯಾವುದೇ

ರೀತಿಯ ವ್ಯತ್ಯಾಸ ಇರಬಾರದು. ಇಲ್ಲಿ ಸಮಸ್ಯೆ ಏನಾಗುತ್ತದೆ ಎಂದರೆ, ಅವರನ್ನು ಆ ಕಡೆಗೆ ಕುಳ್ಳಿರಿಸಿ, ನಾವು ಈ ಕಡೆಗೆ ಕುಳಿತುಕೊಂಡ ತಕ್ಷಣ, ನಮ್ಮಲ್ಲಿ ಅಧಿಕಾರ ಹೊಂದಿರತಕ್ಕವರಿಗೆ time ಸಿಗುವುದಿಲ್ಲ. ಅಧಿಕಾರಿಗಳು ಏನು ತಯಾರು ಮಾಡಿಕೊಂಡು ಬಂದು ಕೊಡುತ್ತಾರೋ, ಸಾಮಾನ್ಯವಾಗಿ ಈ visitors, transfers ಗಳ ಕಾಟ, tour, ಇನ್ನೊಂದು, ಮತ್ತೊಂದು ಇವುಗಳಿಂದೆಲ್ಲಾ ಬಿಡುವು ಮಾಡಿಕೊಂಡು ಸದನಕ್ಕೆ urgent ಆಗಿ ಬರಬೇಕು. ಇಲ್ಲಿ ಅವರು ಏನು ಕೊಡುತ್ತಾರೋ, ಅದನ್ನು ಓದುತ್ತಾರೆ. ಪ್ರತಿ ಮಂತ್ರಿಗಳ ಸಿಬ್ಬಂದಿ ಏನಿರುತ್ತಾರೋ, ಅವರಲ್ಲಿ ಆ ಇಲಾಖೆಗೆ ಸಂಬಂಧಪಟ್ಟಂತೆ ಒಬ್ಬ ಪರಿಣಿತರು ಇರಬೇಕು. ಅವರಿಗೆ guide ಮಾಡುವುದಕ್ಕೆ ಒಬ್ಬ expert in that field ಇರಬೇಕು. Legislature ಇದ್ದಾಗ, ಮಂತ್ರಿಗಳು, they should become students. ಅವರು ಕುಳಿತುಕೊಂಡು, ಚರ್ಚೆ ಮಾಡಿ, ಎಲ್ಲಾ ವಿವರಗಳನ್ನು ತಿಳಿದುಕೊಂಡು, ತಮ್ಮನ್ನು ತಾವು ಕರ್ತವ್ಯದಲ್ಲಿ ತೊಡಗಿಸಿಕೊಳ್ಳಬೇಕು. ನಾವು ಜನರ ಪ್ರತಿನಿಧಿಗಳು, ಸತ್ಯ ಹೊರಗೆ ಬರಬೇಕೇ ಹೊರತು, ಸರ್ಕಾರದಲ್ಲಿದ್ದೇವೆ ಎಂದು ಯಾವುದೋ ಒಂದು ಹೇಳಿಕೆ ಕೊಡುತ್ತೇವೆ ಎಂದರೆ, legislature ಎನ್ನುವುದು ಒಂದು ಅಣಕವಾಗುತ್ತದೆಯೇ ಹೊರತು, ನಿಜವಾದ ಅರ್ಥದಲ್ಲಿ ಜನಪ್ರತಿನಿಧಿಗಳ ಸಭೆ ಆಗುವುದಿಲ್ಲ. ಈಗ ತೆಂಗಿನ ವಿಚಾರದಲ್ಲಿ ಹೇಳುವುದಾದರೆ, ಮಾನ್ಯ ಜಯಚಂದ್ರರವರು ಆ ಭಾಗದಿಂದ ಬರತಕ್ಕವರೇ ಆಗಿದ್ದಾರೆ. ನಾವೂ ಕೂಡ ಸ್ವಲ್ಪ ಮಟ್ಟಿಗೆ ತೆಂಗನ್ನು ಬೆಳೆಯುತ್ತೇವೆ. ಕಷ್ಟ ಎಲ್ಲರಿಗೂ ಗೊತ್ತಿದೆ. ಆದರೆ, ಅವರ ಧ್ವನಿ ಬೇರೆ ಇರುತ್ತದೆ, ನಮ್ಮ ಧ್ವನಿ ಬೇರೆ ಇರುತ್ತದೆ. ಅವರು ಇಲ್ಲಿ ಕುಳಿತಾಗ it gets reversed. We are becoming puppets in the hands of bureaucrats. That should not happen. ನಾವು ನಮ್ಮ ಧ್ವನಿಯಲ್ಲಿ ಮಾತನಾಡಬೇಕು. ಜನಪ್ರತಿನಿಧಿಗಳಾದ ನಾವು policy makers ಆಗಿ, ಜನರ ಮಧ್ಯದಿಂದ ಬಂದವರಾಗಿ, ನಮ್ಮ ನೋವಿನ ಧ್ವನಿ ಇಲ್ಲಿ ಪ್ರತಿನಿಧಿಸಿದರೆ, ನಮ್ಮ ನೋವಿನ ಧ್ವನಿಗೆ ಇಲ್ಲಿ ಉತ್ತರ ಕೊಟ್ಟರೆ, ಸಮಸ್ಯೆಗೆ ಪರಿಹಾರ ಸಿಗುತ್ತದೆ. ಇಲ್ಲದಿದ್ದರೆ ಎಷ್ಟು ವರ್ಷಗಳಾದರೂ ಸುಮ್ಮನೆ ಆರೋಪ-ಪ್ರತ್ಯಾರೋಪಗಳನ್ನು ಮಾಡಿಕೊಂಡು, ನಮ್ಮನ್ನು ನಾವು ಸಣ್ಣವರನ್ನಾಗಿ ಮಾಡಿಕೊಂಡು, ಪೇಪರ್‌ಗಳಲ್ಲಿ ಅದು ಬಂದು,

ಅದನ್ನು ಇವರು ಮನೆಯಲ್ಲಿ ಓದಿ ನಕ್ಕು ಖುಷಿಯಾಗಿರುತ್ತಾರೆ. ಅವರಿಗೆ ತೆಂಗು ಏನಾದರೂ ಪರವಾಗಿಲ್ಲ, ಟೊಮ್ಯಾಟೊ ಏನಾದರೂ ಪರವಾಗಿಲ್ಲ. 31ನೇ ತಾರೀಖಿಗೆ ರಜೆ ಇದ್ದರೆ, 30ನೇ ತಾರೀಖೇ ಅವರಿಗೆ ಸಂಬಳ ಕೊಡುತ್ತಾರೆ. ಆದರೆ ನಮ್ಮ ಪರಿಸ್ಥಿತಿ ಹಾಗಲ್ಲ. We have to again go to public scrutiny, all of us. ನಾನು ಇಡೀ ಸದನದ ಪರವಾಗಿ ಮಾತನಾಡುತ್ತಿದ್ದೇನೆ. ದಯಮಾಡಿ ಕ್ಷಮೆ ಇರಲಿ, ನಿಮ್ಮ ಮಧ್ಯ ಪ್ರವೇಶ ಮಾಡಿ, time ತೆಗೆದುಕೊಂಡಿದ್ದೇನೆ. ಎಲ್ಲಾ Ministers ಗೆ ನಾನು ಸ್ವಲ್ಪ appeal ಮಾಡಿಕೊಳ್ಳುತ್ತೇನೆ. ದಯಮಾಡಿ immediately, ಉದಾಹರಣೆಗೆ Medical Education ಮಂತ್ರಿಗಳು ಇರಬಹುದು, you have one expert with you. ಹಾಗೆಯೇ, Irrigation ಇಲಾಖೆ ಮಂತ್ರಿಗಳು ಇರಬಹುದು, you have one expert with you. ಯಾರೋ ಇವರಿಗೆ ಬೇಕಾದವರನ್ನು, ಇವರ ಮಾತು ಕೇಳುವವರನ್ನು ಇವರ PA ಎಂದೋ ಅಥವಾ PS ಎಂದೋ ನೇಮಕ ಮಾಡಿಕೊಳ್ಳುವುದು, ಅವನು ದೊಡ್ಡ ದೇವಲೋಕದಿಂದ ಇಳಿದು ಬಂದಂಥವನಾಗಿ ಬಿಡುತ್ತಾನೆ, ಅವನು Minister ಗಿಂತ ದಪ್ಪಗೆ ಆಗಿ ಬಿಡುತ್ತಾನೆ. ಅವನ ಹತ್ತಿರ ಹೋಗಿ ನಾವು ಮಾತನಾಡುವುದಕ್ಕೆ ಆಗುವುದಿಲ್ಲ. We have been seeing this with all the people, all the successive Governments. This should not happen. ತಾವು ಸ್ವಲ್ಪ ಮನಸ್ಸು ಮಾಡಿದರೆ, you can pull the wires. ನಿಮಗೆ ಆ ಶಕ್ತಿ ಇದೆ, ನಿಮ್ಮಲ್ಲಿ ನನಗೆ ಆ ವಿಶ್ವಾಸವಿದೆ.

ಶ್ರೀ ಹೆಚ್.ಡಿ.ಕುಮಾರಸ್ವಾಮಿ (ವಿರೋಧ ಪಕ್ಷದ ನಾಯಕರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದ್ದಕ್ಕೆ supportive ಆಗಿ ಒಂದು ಮಾತನ್ನು ಹೇಳಬಯಸುತ್ತೇನೆ. ಇಲ್ಲಿ ಸದಸ್ಯರುಗಳು ಇವತ್ತು ತೆಂಗಿನ ವಿಷಯದಲ್ಲಿ ಆಗಿರತಕ್ಕ ತೊಂದರೆಗಳ ಬಗ್ಗೆ ಚರ್ಚೆ ಮಾಡುತ್ತಿದ್ದಾರೆ. ಸನ್ಮಾನ್ಯ ಹಿರಿಯ ಸದಸ್ಯರಾಗಿರುವ ರಮೇಶ್‌ಕುಮಾರ್‌ರವರು ಅಧಿಕಾರಿಗಳ ಮೇಲೆ ಲೋಪ ಹೊರಿಸುತ್ತಿದ್ದಾರೆ. ಆದರೆ ಆ ಭಾಗದಲ್ಲಿ ಕುಳಿತು ನನ್ನ ಅನುಭವದಲ್ಲಿ ಹೇಳವುದಾದರೆ, ಕಬ್ಬು ಬೆಳೆಗಾರರು ಕಬ್ಬನ್ನು ಬೆಳೆದು ಮಾರಾಟ ಮಾಡಲಿಕ್ಕಾಗಲಿಲ್ಲ. 238 ಕೋಟಿ ರೂ.ಗಳ ಹಣವನ್ನು ನಾವು ಅವತ್ತು ರೈತರಿಗೆ

ಸಹಾಯಧನವನ್ನು ಕೊಟ್ಟೆವು. ನನಗೆ ಆಗ ಯಾವ ಅಧಿಕಾರಿಗಳೂ ವಿರೋಧ ಮಾಡಲಿಲ್ಲ ಅಥವಾ ಅಧಿಕಾರಿಗಳು ಅದನ್ನು ಕೊಡಬೇಡಿ ಎಂದು ಹೇಳಲಿಲ್ಲ. ಆ ಜಾಗದಲ್ಲಿ ಕುಳಿತು ಕೆಲಸ ಮಾಡುವವರಿಗೆ ಹೃದಯ ವೈಶಾಲ್ಯತೆ ಇರಬೇಕು. ವಾಸ್ತವಾಂಶ ಏನು? ಯಾರ್ಯಾರಿಗೆ ಯಾವ್ಯಾವ ಕಷ್ಟಗಳಿವೆ, ಅದಕ್ಕೆ ಯಾವ ರೀತಿಯಾಗಿ ಸರ್ಕಾರದವರಾದ ನಾವು ಯಾವ ಪಾಲಿಸಿ ಮಾಡಬೇಕು ಎಂಬುದು ಗೊತ್ತಿರಬೇಕು.

ಅಧ್ಯಕ್ಷರು : ಅದನ್ನೇ ಅವರೂ ಹೇಳಿದ್ದು.

ಶ್ರೀ ಹೆಚ್.ಡಿ.ಕುಮಾರಸ್ವಾಮಿ :– ಅವರು ಅಧಿಕಾರಿಗಳು ಹೇಳಿದ ಹಾಗೆ ಕೇಳಬೇಡಿ ಎಂದು ಹೇಳುತ್ತಿದ್ದಾರೆ. ನಾವು ಅಧಿಕಾರಿಗಳ ಮೇಲೆ ದೋಷ ಹೊರಿಸಿದರೆ, ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅಲ್ಲಿ ಕುಳಿತು ಕೆಲಸ ಮಾಡಿ ಎಂದು ಜನರು ನಮ್ಮನ್ನು ಆರಿಸಿ ಕಳುಹಿಸಿದ್ದಾರೆ. ಅಧಿಕಾರಿಗಳು ಜನರಿಗೆ ಉತ್ತರವನ್ನು ಕೊಡುವುದಿಲ್ಲ. ನಾವು ಜನರಿಗೆ ಉತ್ತರ ಕೊಡಬೇಕಾಗುತ್ತದೆ. ಅಧಿಕಾರಿಗಳ ಹತ್ತಿರ ಜನರ್ಯಾರೂ ಹೋಗುವುದಿಲ್ಲ. ಆದ್ದರಿಂದ, ಆ ಜಾಗದಲ್ಲಿ ಕುಳಿತು ಕೆಲಸ ಮಾಡತಕ್ಕವರಿಗೆ, ಯಾರ್ಯಾರ ಪರಿಸ್ಥಿತಿಗಳು ಏನಿದೆ, ಆ ಪರಿಸ್ಥಿತಿಗಳಿಗೆ ನಾವು ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಬೇಕು ಎನ್ನತಕ್ಕಂಥ ಬದ್ಧತೆ ಮತ್ತು ಆ ಹೃದಯ ವೈಶಾಲ್ಯತೆ ಇದ್ದರೆ, ಯಾವ ರೀತಿ ಬೇಕಾದರೂ ಅಧಿಕಾರಿಗಳನ್ನು ಇವತ್ತು ದಾರಿಗೆ ತಂದು ಕೆಲಸ ಮಾಡಿಸಬಹುದು. ಆದ್ದರಿಂದ, ಇವತ್ತು ತಾವು ಹೇಳಿದಂತಹ ರೀತಿಯಲ್ಲಿ, ತೆಂಗು ಬೆಳೆ ಇರಬಹುದು, ದಾಳಿಂಬೆ ಬೆಳೆ ಬೆಳೆಯತಕ್ಕವರು ಇರಬಹುದು ನಾನು ನೋಡಿದೆ, ಕೊಪ್ಪಳ ಜಿಲ್ಲೆಯವರು ಬಹುಶಃ freedom park ನಲ್ಲೋ, ಎಲ್ಲೋ ಧರಣಿ ಕುಳಿತಿದ್ದರು. ಇದರ ಬಗ್ಗೆ ಹಿಂದೆ ಇದ್ದಂತಹ ಮಾನ್ಯ ಸದಸ್ಯರಾದ ಬಯ್ಯಾಪುರರವರು ಪ್ರಸ್ತಾಪಿಸಿದ್ದನ್ನು ಗಮನಿಸಿದ್ದೇನೆ. ಆದರೆ ಸರ್ಕಾರಗಳು ಈ ವಿಷಯದಲ್ಲಿ ರೈತರನ್ನು ಉಳಿಸಲಿಕ್ಕೆ ಕ್ರಮ ತೆಗೆದುಕೊಳ್ಳಬೇಕು. ನಾನು ಅದಕ್ಕಾಗಿಯೇ *'ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು'* ಎಂದು ಹೇಳಿದ್ದೇನೆ. ಅವರೂ ಈಗ ಬೆಳಿಗ್ಗೆ ಹೇಳಿದರು. ಅವರೂ ಹೇಳುತ್ತಿದ್ದುದ್ದನ್ನು ನಾನು ನೋಡಿದೆ. ರೈತರನ್ನು ಏತಕ್ಕಾಗಿಯೋ, ಎಲ್ಲರೂ ಕಡೆಗಣಿಸುತ್ತೇವೆ. ರೈತರ ವಿಷಯ ಬಂದಾಗ ನಾವು ಒಂದು ರೀತಿ ಅವರ ಬಗ್ಗೆ ಮಾತನಾಡುತ್ತೇವೆ, ಆದರೆ ರೈತರನ್ನು ಯಾವ

ರೀತಿಯಾಗಿ ಮೇಲಕ್ಕೆತ್ತಬೇಕು ಎನ್ನುವುದಕ್ಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕಾದರೆ ಉದಾಸೀನತೆ ತೋರಿಸುತ್ತಿದ್ದೇವೆ. ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತಹ ರೀತಿಯಲ್ಲಿ ಸರ್ಕಾರ ಮನಸ್ಸು ಮಾಡಿದರೆ ಯಾವುದೂ ಅಸಾಧ್ಯವಿಲ್ಲ. ಇವತ್ತು ನನಗೆ ತಿಳಿದಿರತಕ್ಕಂಥ ಮಾಹಿತಿ ಪ್ರಕಾರ ಸರ್ಕಾರದಲ್ಲಿ ಹಣದ ಕೊರತೆ ಇಲ್ಲ. ಇವತ್ತು ರೈತರು ಎಂತಹ ಕಷ್ಟದಲ್ಲಿ ಇದ್ದಾರೆ ಎಂದು ತಿಳಿದು, ರೈತರಿಗೆ ಯಾವ ರೀತಿಯಾಗಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕೆಂದು ನೋಡಬೇಕು. ಅದಕ್ಕಾಗಿಯೇ ನಾನು ನಿನ್ನೆ ಇದರ ಬಗ್ಗೆ ಚರ್ಚೆ ಮಾಡುವುದಿಲ್ಲ ಎಂದು ಹೇಳಿದ್ದೆ. ಬಜೆಟ್‌ನಲ್ಲಿ ಈ ಸರ್ಕಾರ ಏನೊಂದು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೋ ಎಂಬುದನ್ನು ನೋಡಿ, ನಂತರ ಇದರ ಬಗ್ಗೆ ಚರ್ಚೆಯನ್ನು ಮಾಡೋಣವೆಂದು ನಿನ್ನೆ ಹೇಳಿದ್ದೆ. ಆದ್ದರಿಂದ, ಮಾನ್ಯ ರಮೇಶ್‌ಕುಮಾರ್‌ರವರು ಹೇಳಿದಂತಹ ರೀತಿಯಲ್ಲಿ, ನಮ್ಮ ಕಾನೂನು ಸಚಿವರೂ ಇಲ್ಲಿದ್ದಾರೆ, ನಾವು ಕೇವಲ ಅಧಿಕಾರಿಗಳ ಮೇಲೆ ದೋಷ ಹೊರಿಸುವುದು ಬೇಡ. ಅಧಿಕಾರಿಗಳಿಂದ ಯಾವ ರೀತಿಯಾಗಿ ಕೆಲಸ ಮಾಡಿಸಬೇಕು ಎನ್ನುವುದು ನಿಮ್ಮ ಕೈಯ್ಯಲ್ಲೇ ಇರುತ್ತದೆ. ನಾನು ಯಾವುದೋ ಕಳಂಕಿತರನ್ನು ದೂರವಿಡಿ ಎಂದು ದೆಹಲಿಯಿಂದ message ಬಂದಿದೆ ಎಂದು ವರದಿಯಾಗಿರುವುದನ್ನು ಪತ್ರಿಕೆಯಲ್ಲಿ ನೋಡಿದೆ. ಅಧಿಕಾರಿಗಳು ಕಳಂಕಿತರಾಗಿದ್ದಾರೆ ಎಂಬ ಬಗ್ಗೆ ನಿಮ್ಮ ಬಳಿ ಮಾಹಿತಿ ಇದ್ದರೆ, ಅವರನ್ನು ಸರ್ಕಾರದ ಅಧಿಕಾರಿಗಳಾಗಿ ಏಕೆ ಮುಂದುವರೆಸುತ್ತೀರಿ? ಅವರನ್ನು ದೇಶ ಬಿಟ್ಟು ಆಚೆಗೆ ಕಳುಹಿಸಬೇಕು, ಇಲ್ಲವೇ ಅಂತಹ ಅಧಿಕಾರಿಗಳನ್ನು ರಜೆಯ ಮೇಲೆ ಮನೆಗೆ ಕಳುಹಿಸಬೇಕು. ಆದ್ದರಿಂದ ಇವತ್ತು ಮಾನ್ಯ ರಮೇಶ್ ಕುಮಾರ್‌ರವರು ಹೇಳಿದಂತಹ ರೀತಿಯಲ್ಲಿ ಅಧಿಕಾರಿಗಳ ಮೇಲೆ ಲೋಪ ಹೊರಿಸಬಾರದು. ಸರ್ಕಾರ ಬಜೆಟ್ ಅನ್ನು ಬಹುಶಃ ಜುಲೈ ತಿಂಗಳಿನಲ್ಲಿ ಮಂಡನೆ ಮಾಡುತ್ತಿದೆ. ಆಗಲಾದರೂ ರೈತರ ಬಗ್ಗೆ ಸ್ವಲ್ಪ ಕನಿಕರ ಹಾಗೂ ಅನುಕಂಪ ತೋರಿಸಿ ಎಂದು ಮಾನ್ಯ ಅಧ್ಯಕ್ಷರ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ,..

ಅಧ್ಯಕ್ಷರು :– ವಿಳಂಬವಾಗುತ್ತದೆ, ಈಗಾಗಲೇ 1.30 ಗಂಟೆಯಾಯಿತು. ಏನು ಹೇಳಬೇಕೋ ಅದನ್ನು ಬೇಗ ಹೇಳಿ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ. ಮಾನ್ಯ ರಮೇಶ್‌ಕುಮಾರ್‌ರವರು ಪ್ರಸ್ತಾಪಿಸಿದ ವಿಷಯದ ಬಗ್ಗೆ ಇವತ್ತು ಮಾನ್ಯ ವಿರೋಧ ಪಕ್ಷದ ನಾಯಕರೂ ಕೂಡ ಧ್ವನಿಗೂಡಿಸಿದ್ದಾರೆ. ನಾನು ಸ್ಪಷ್ಟವಾಗಿ ತಮ್ಮ ಸಲಹೆಗಳನ್ನು ಸ್ವಾಗತಿಸುತ್ತೇನೆ. ನಾನು ಸ್ಪಷ್ಟವಾದಂತಹ ವಿಚಾರವನ್ನು ಹೇಳಲಿಕ್ಕೆ ಇಷ್ಟಪಡುತ್ತೇನೆ. ಅಧಿಕಾರಿಗಳು ನಮ್ಮ ವ್ಯವಸ್ಥೆಯ ಒಂದು ಭಾಗ, ನಮ್ಮ ವ್ಯವಸ್ಥೆ ಆ ರೀತಿಯಾಗಿದೆ. ಆ ವ್ಯವಸ್ಥೆಯಲ್ಲಿ ಅವರು ಕೇವಲ ಸಲಹೆ ಕೊಡತಕ್ಕವರು ಆಗುತ್ತಾರೆಯೇ ವಿನಃ ತೀರ್ಮಾನ ಮಾತ್ರ, ಈ ಸರ್ಕಾರದಲ್ಲಿ ಮಂತ್ರಿಗಳದ್ದೇ, ಸರ್ಕಾರದ್ದೇ ಆಗಿರುತ್ತದೆ. ಅಧಿಕಾರಿಗಳು ಯಾರೂ ಉತ್ತರವನ್ನು ಇಲ್ಲಿ ಕೊಡುವುದಕ್ಕಾಗುವುದಿಲ್ಲ.

ಅಧ್ಯಕ್ಷರು :– ಅದು ಎಲ್ಲರಿಗೂ ಗೊತ್ತಿರುವುದೇ ಆಗಿದೆ, ಬಿಡಿ.

ಶ್ರೀ ಟಿ.ಬಿ.ಜಯಚಂದ್ರ :– ಅಧಿಕಾರಿಗಳು ಏನೇ ಸಲಹೆ ಕೊಟ್ಟರೂ ತೀರ್ಮಾನ ನಮ್ಮದ್ದೇ ಆಗಿರುತ್ತದೆ. ರೈತರ ವಿಷಯದ ಪ್ರಸ್ತಾಪವಾದಾಗ ಅಥವಾ ಇನ್ನಿತರ ಯಾವುದೇ ವಿಚಾರದ ಬಗ್ಗೆ ಇಲ್ಲಿ ಪ್ರಸ್ತಾಪವಾದಾಗ, ಇವತ್ತು ಮಂತ್ರಿಗಳಾಗಿರತಕ್ಕವರ ತೀರ್ಮಾನವೇ ಅಂತಿಮವಾಗಿರುತ್ತದೆ.

ಅಧ್ಯಕ್ಷರು : ಹಾಗಾದರೆ ನಾಳೆಯೇ Purchase Centre ಅನ್ನು open ಮಾಡಿ.

ಶ್ರೀ ಟಿ.ಬಿ.ಜಯಚಂದ್ರ :– ಮಾನ್ಯ ಅಧ್ಯಕ್ಷರೆ, ಈಗ ನೀವು ಮಾತನಾಡಲು ಅವಕಾಶ ಕೊಟ್ಟಿದ್ದೀರಿ. ಆದ್ದರಿಂದ ಈ ಬಗ್ಗೆ ನಾವು ಹೇಳಲೇಬೇಕಾಗುತ್ತದೆ.

ಅಧ್ಯಕ್ಷರು : ಆಯಿತು. ಮಾನ್ಯ ರೇವಣ್ಣನವರೆ, ಟೈಮ್ ಆಯಿತು, ಬೇಗ ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ತೋಟಗಾರಿಕೆ ಬೆಳೆಗಳ ಬಗ್ಗೆ ಒಂದೆರಡು ಉದಾಹರಣೆ ಇದೆ.

ಅಧ್ಯಕ್ಷರು :– ಆ ಬಗ್ಗೆ ನೀವು ಹೇಳಿದ್ದಾಯಿತು. ಈಗ ಸರ್ಕಾರ ಏನು ಮಾಡಬೇಕೆಂದು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ :– ಸರ್, ಅದನ್ನೂ ಹೇಳುತ್ತೇನೆ. ತೆಂಗು ತೋಟಗಾರಿಕೆ ಬೆಳೆಯಾಗಿದೆ. ಇವತ್ತು ಅದು ರಾಜ್ಯದಲ್ಲಿ 3ನೇ ಬೆಳೆಯಾಗಿದೆ.

ನಮ್ಮ ಜಿಲ್ಲೆಯಲ್ಲಿ major ಆಗಿ ನಾವು ತೆಂಗನ್ನು ಬೆಳೆಯುತ್ತೇವೆ. ಚನ್ನರಾಯಪಟ್ಟಣ ಇರಬಹುದು, ಅರಸೀಕೆರೆ ಇರಬಹುದು.

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ತಾವು ಹಿರಿಯ ಸದಸ್ಯರಾಗಿದ್ದೀರಿ.

ಶ್ರೀ ಹೆಚ್.ಡಿ.ರೇವಣ್ಣ :– ಒಂದು ನಿಮಿಷ ಕೆಲವೊಂದು ವಿಚಾರಗಳನ್ನು ಹೇಳಿ ಬಿಡುತ್ತೇನೆ.

ಅಧ್ಯಕ್ಷರು :– ಈಗ ಇದಕ್ಕೆ ಏನು ಪರಿಹಾರ ಮಾಡಬೇಕೆಂಬುದನ್ನು ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಪರಿಹಾರದ ಬಗ್ಗೆ ಹೇಳುವುದಕ್ಕಿಂತ ಮುಂಚೆ ಒಂದೆರಡು ವಿಷಯಗಳನ್ನು ತಮ್ಮ ಗಮನಕ್ಕೆ ತರಲಿಚ್ಛಿಸುತ್ತೇನೆ. ಒಂದು ಕಡೆ ಮಾನ್ಯ ರಮೇಶ್ ಕುಮಾರ್‌ರವರು ಟೊಮ್ಯಾಟೊ ಹಣ್ಣಿನ ಬಗ್ಗೆ ಹೇಳಿದ್ದಾರೆ. ನನ್ನ ಪರಿಸ್ಥಿತಿ ಬಗ್ಗೆ ಸ್ವಲ್ಪ ಹೇಳುತ್ತೇನೆ. ನಮ್ಮ ಜಿಲ್ಲೆಯಲ್ಲಿ ಒಂದು ಕಡೆ ತೆಂಗಿನ ಗಿಡವೆಲ್ಲಾ ಒಣಗಿ ನಾಶವಾಗುತ್ತಿವೆ. ಇನ್ನೊಂದು ಕಡೆ ಆಲೂಗಡ್ಡೆ ಬೆಳೆ ನಾಶದ ಬಗ್ಗೆ ನಾವು ಕಳೆದ ಮೂರು ವರ್ಷಗಳಿಂದ ಪರಿಹಾರ ಕೇಳುತ್ತಿದ್ದರೂ ಕೊಟ್ಟಿಲ್ಲ. Central Government ನವರನ್ನು, ಮಾನ್ಯ ಪ್ರಧಾನ ಮಂತ್ರಿಗಳವರನ್ನು ಕೇಳಿಕೊಂಡೆವು. ಮಾನ್ಯ ಮುಖ್ಯಮಂತ್ರಿಗಳ ಹತ್ತಿರ ಮೂರು ಸಲ ಹೇಳಿದೆವು. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ದುಡ್ಡು ಕೊಡುತ್ತೇವೆಂದು ಹೇಳಿ, ಅದಕ್ಕೂ ಟೋಪಿ ಹಾಕಿದರು.

ಅಧ್ಯಕ್ಷರು :– ಮಾನ್ಯ ರೇವಣ್ಣನವರೆ, ಮಾನ್ಯ ರಮೇಶ್ ಕುಮಾರ್‌ರವರೂ ಸಹ ಇಲ್ಲಿದ್ದಾರೆ. ಕೃಷಿ ಬೆಳೆಗಳ ಬೆಲೆ ಮತ್ತು ಮಾರಾಟ ವಿಚಾರದಲ್ಲಿ ರೈತರಿಗೆ security ಸಿಗುವ ವಿಷಯದ ಬಗ್ಗೆ ವಿಶೇಷವಾದಂತಹ ಚರ್ಚೆ ಮಾಡೋಣ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ಒಂದು ವಿಷಯವನ್ನು ತಮ್ಮ ಗಮನಕ್ಕೆ ತಂದು ಬಿಡುತ್ತೇನೆ. ನಮ್ಮಲ್ಲಿ ರೈತರು ಆಲೂಗಡ್ಡೆ ಹಾಕುತ್ತಿದ್ದಾರೆ.

ಅಧ್ಯಕ್ಷರು : ತಾವು ಹೇಳಿದ್ದನ್ನು ನಾನು ಒಪ್ಪುತ್ತೇನೆ.

ಶ್ರೀ ಹೆಚ್.ಡಿ.ರೇವಣ್ಣ :– ಮಾನ್ಯ ಅಧ್ಯಕ್ಷರೆ, ದಯಮಾಡಿ ತಮಗೆ ಕೈ ಮುಗಿಯುತ್ತೇನೆ. ಒಂದೇ ನಿಮಿಷದಲ್ಲಿ ತಮ್ಮ ಗಮನಕ್ಕೆ ತರುತ್ತೇನೆ. 1200 ರೂ.ಗಳ ರೇಟ್ ಇದ್ದದ್ದನ್ನು ಇವತ್ತು 1750–1450 ರೂ.ಗಳಿಗೆ ಮಾರಾಟ ಮಾಡುತ್ತಿದ್ದಾರೆ. ಅಲ್ಲಿ 900 ರೂ.ಗಳಿಗೆ ತರುತ್ತಾರೆ, ಇಲ್ಲಿ 1400 ರೂ.ಗಳಿಗೆ

ಮಾರಾಟ ಮಾಡುತ್ತಿದ್ದಾರೆ. ಒಂದು ಮೂಟೆಗೆ 500 ರೂ.ಗಳ ಲಾಭಕ್ಕೆ ಮಾರುತ್ತಿದ್ದಾರೆ. ಇಲ್ಲಿ ಏನಾಗುತ್ತಿದೆ ಎಂದರೆ, ರೈತರು ತೆಗೆದುಕೊಂಡು ಹೋಗುತ್ತಿದ್ದಾರೆ, ಅದಕ್ಕೆ ಏನೂ Certify ಮಾಡಲ್ಲ. Certified ಇಲ್ಲದ seed ತೆಗೆದುಕೊಂಡು ಹೋಗಿ ಹಾಕುತ್ತಿದ್ದಾರೆ. ಅದನ್ನು ತೆಗೆದುಕೊಂಡು ಹೋಗಿ ಹಾಕುವುದರಿಂದ, ಅಂಗಮಾರಿ ರೋಗ ಬರುತ್ತದೆ, entire ಬೆಳೆ ನಾಶವಾಗುತ್ತದೆ. ನಮ್ಮಲ್ಲಿ ಕನಿಷ್ಠ 300–400 ಕೋಟಿ ರೂ.ಗಳ ಆಲೂಗಡ್ಡೆ ಬೆಳೆ ನಾಶವಾಯಿತು. ಈ ಬಗ್ಗೆ ಯಾರೂ ಕೇಳಲಿಲ್ಲ, ಪರಿಹಾರವನ್ನೂ ಕೊಡಲಿಲ್ಲ. ಕೇಂದ್ರ ಸರ್ಕಾರವೂ ಕೊಡಲಿಲ್ಲ, ರಾಜ್ಯವೂ ಕೊಡಲಿಲ್ಲ.

ಅಧ್ಯಕ್ಷರು :– ನೀವು ಸರಿಯಾಗಿ ಕೇಳಿಲ್ಲ. ಇದಕ್ಕಾಗಿ ನೀವೊಂದು 'ಜೈಲ್ ಭರೋ' ಕಾರ್ಯಕ್ರಮ ಹಾಕಿಕೊಳ್ಳಬೇಕಾಗಿತ್ತು.

ಶ್ರೀ ಹೆಚ್.ಡಿ.ರೇವಣ್ಣ :– ನೀವು ಜೈಲಿಗೆ ಹೋಗಿ ಎನ್ನುವುದಾದರೆ, ಅಲ್ಲಿ ಊಟ–ತಿಂಡಿ ಕೊಡುತ್ತಾರೆ, ನಾವು ಜೈಲಿಗೆ ಹೋಗುತ್ತೇವೆ. ನೀವೊಂದು ಆದೇಶ ಮಾಡಿದರೆ, ನಾವು ಐದೂ ಜನ ಬೇಕಾದರೆ ಜೈಲಿನಲ್ಲಿ ಇರುತ್ತೇವೆ. ಅದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ.

ಅಧ್ಯಕ್ಷರು :– 'ಹೋರಾಟ ಜೈಲು, ಅನ್ಯಾಯ ಬಯಲು'

ಶ್ರೀ ಹೆಚ್.ಡಿ.ರೇವಣ್ಣ :– ಸರ್, ನೀವು ಆ ತರಹ ಹೇಳಿದರಲ್ಲ, ನಮ್ಮ ಸಾಹೇಬರು ಈ ರೀತಿ ಹೇಳಿದ್ದಾರೆಂದು ನಾಳೆಯಿಂದಲೇ ನಮ್ಮ ಜಿಲ್ಲೆಯಲ್ಲಿ ಕರೆ ಕೊಡುತ್ತೇವೆ. ಸರ್ಕಾರ ಎರಡು ತರಹವಿದೆ, ನಮ್ಮ ಹತ್ತಿರ ಎಳೆನೀರನ್ನು ರೂ.2 ಕ್ಕೆ ತೆಗೆದುಕೊಂಡು ಹೋಗುತ್ತಾರೆ, ರೂ.15 ಗೆ ಮಾರುತ್ತಾರೆ. ಅವರೇನೂ ಗೊಬ್ಬರ ಹಾಕುವುದಿಲ್ಲ, ನಾವು ತೆಂಗಿನ ಗಿಡವನ್ನು 10 ವರ್ಷ ಬೆಳೆಸಿ ರೂ.5 ಗೆ ಎಳೆನೀರನ್ನು ಮಾರುತ್ತಿದ್ದೇವೆ, ಬರೀ ಅಲ್ಲಿ ಅವರು ಕುಳಿತುಕೊಂಡು ಎರಡು ದಿವಸಕ್ಕೆ ರೂ.10 ಲಾಭ ಮಾಡುತ್ತಾರೆಂದರೆ, ಸರ್ಕಾರ ಮಧ್ಯಪ್ರವೇಶ ಮಾಡಬೇಕು.

ಅಧ್ಯಕ್ಷರು :– ಸರ್ಕಾರ ಏನು ಮಾಡಬೇಕು, ಹೇಳಿ.

ಶ್ರೀ ಹೆಚ್.ಡಿ.ರೇವಣ್ಣ :– ಮಧ್ಯಪ್ರವೇಶವೆಂದರೆ, ಈಗ ಹಾಪ್‌ಕಾಮ್ಸ್ ಇದೆ, ಆದರಿಂದ ಪ್ರತಿ ತಾಲ್ಲೂಕಿನ ಹಾಪ್‌ಕಾಮ್ಸ್ ನಿಂದ ಮಾರುಕಟ್ಟೆಯಲ್ಲಿ ಎಳೆನೀರನ್ನು ಖರೀದಿ ಮಾಡಿ. ಪ್ರತಿ ತಾಲ್ಲೂಕಿನ ಹಾಪ್‌ಕಾಮ್ಸ್ ನಿಂದ ಎಳೆನೀರು ಇರಬಹುದು, ತೆಂಗಿನ ಕಾಯಿ ಇರಬಹುದು, ಈಗ ಹಾಸ್ಟೆಲ್‌ಗಳಿವೆ,

ಇವಕ್ಕೆ ತೆಂಗಿನ ಕಾಯಿಗಳನ್ನು ಸರಬರಾಜು ಮಾಡಬಹುದಲ್ಲ? ಸರ್ಕಾರಿ ಹಾಸ್ಟೆಲ್‌ಗಳಲ್ಲಿ ಏನು ಮಾಡುತ್ತಾರೆಂದರೆ, ರೂ.8ಕ್ಕೆ ತಂದು ರೂ.15 ಬಿಲ್ ಹಾಕುತ್ತಿದ್ದಾರೆ, ಆ ಪರಿಸ್ಥಿತಿ ಇದೆ. ದಯಮಾಡಿ, ಒಂದು ಇಡೆ ಇವತ್ತು ನುಸಿ ರೋಗವಿದೆ, ಕಾರ್ಯಕ್ರಮ ರೂಪಿಸಿ, ಆ ನುಸಿ ರೋಗ ಹೋಗುವುದಕ್ಕೆ ಅವಕಾಶ ಮಾಡಬೇಕು. ಅದಲ್ಲದೆ ಹೊಸದಾಗಿ ಯಾರು ರೈತರು ತೆಂಗಿನ ಗಿಡವನ್ನು ನಾಟಿ ಮಾಡುತ್ತಾರೆ, ಅವರಿಗೆ 50% ಸಬ್ಸಿಡಿ ಕೊಟ್ಟು ಆ ಬೆಳೆ ರಕ್ಷಣೆ ಮಾಡುವುದಕ್ಕೆ ಅವಕಾಶ ಮಾಡಬೇಕೆನ್ನುವುದು ಒಂದು ವಿನಂತಿ. ಈಗ ದತ್ತ ಅವರು, NAFED ನವರು ನಾವು ಕೊಡುವ ದುಡ್ಡು ಲಾಸ್ ಆದರೆ ನಾವು ತೆಗೆದುಕೊಳ್ಳುವುದಿಲ್ಲವೆನ್ನುವ ವೇದನೆಯನ್ನು ವ್ಯಕ್ತಪಡಿಸಿದರು, ರಾಜ್ಯ ಸರ್ಕಾರ ಕೊಡಲಿ. ಕೇಂದ್ರ ಸರ್ಕಾರದ್ದು ಬೇಡ, ಈಗ ಕೇಂದ್ರ ಸರ್ಕಾರ ಕೊಡುವುದಿಲ್ಲ ನಾವೇನು ಮಾಡೋಣ? ಅಲ್ಲಿ ಯುಪಿಎ ಸರ್ಕಾರ, ಇಲ್ಲಿ ಕಾಂಗ್ರೆಸ್ ಸರ್ಕಾರವಿದೆ. ಪ್ರಯತ್ನ ಪಡಲಿ, ಆಗುವುದಿಲ್ಲವೆಂದರೆ ರಾಜ್ಯ ಸರ್ಕಾರವೇ ತೆಂಗಿನ ಕಾಯಿ ಇರಬಹುದು, ಎಳನೀರು ಇರಬಹುದು ಇದಕ್ಕೆ ಬೆಂಬಲ ಬೆಲೆಯನ್ನು ಕೊಡಬೇಕಾಗುತ್ತದೆ. ಸ್ವಾಮಿ 2012–13ರಲ್ಲಿ ರೂ. 321 ಕೋಟಿ ಬೆಳೆ ನಾಶವಾಗಿದೆ, 2013–14ರಲ್ಲಿ ಎಷ್ಟಾಗಿದೆ? ಅದಕ್ಕಿಂತ ಹಿಂದೆ ಎಷ್ಟು ನಷ್ಟವಾಗಿದೆ? ಈಗ ಉದಾಹರಣೆಗೆ ಬರೀ ರೂ.100 ಕೋಟಿ ಮಾತ್ರ ಇಟ್ಟಿದ್ದೇವೆನ್ನುತ್ತಾರೆ. ಸರ್ಕಾರಿ ಆದೇಶ ದಿನಾಂಕ:22.2.2013 ಪ್ರಕಾರ ರೈತರಿಗೆ ಬೆಳೆ ಹಾನಿ ಪರಿಹಾರ ಸಹಾಯಧನ ನೀಡಲು ಅನುದಾನ ಬಿಡುಗಡೆ ಮಾಡಲಾಗಿದ್ದು ರೂ. 100 ಕೋಟಿ ಅನುದಾನವನ್ನು ಇಟ್ಟಿದ್ದಾರೆ. ದಯಮಾಡಿ ನಮಗೆ ಅದನ್ನೂ ಕೂಡ ತಿಳಿಸಬೇಕಲ್ಲ? ಮಂತ್ರಿಗಳು ಉತ್ತರವನ್ನು ಕೊಡುವಾಗ ರೂ.100 ಕೋಟಿ ಇಟ್ಟಿದ್ದೀರಲ್ಲ, ಅದರಲ್ಲಿ ರೈತರಿಗೆ ಎಷ್ಟು ಹಣವನ್ನು ಕೊಟ್ಟಿದ್ದೀರೆಂದು ದಯಮಾಡಿ ತಿಳಿಸಿ? ಸುಮ್ಮನೆ ರೂ.100 ಕೋಟಿ ಎಂದಿಟ್ಟುಬಿಟ್ಟು, ರೈತರಿಗೆ ಪರಿಹಾರವೇ ಕೊಡದೆ ರೂ.100 ಕೋಟಿ ಎಂದರೆ ಆಗುತ್ತದೆಯೇ? ಕಳೆದ 5 ವರ್ಷದ್ದು ವರ್ಷವಾರು ವಿವರ ತೆಗೆದುಕೊಳ್ಳಿ, 5 ವರ್ಷದಲ್ಲಿ ತೆಂಗಿನ ಗಿಡ ಎಷ್ಟು ನಷ್ಟವಾಗಿದೆ, ಅದಕ್ಕೆ ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರ ಎಷ್ಟು ಪರಿಹಾರವನ್ನು ಕೊಟ್ಟಿದೆ? ಕೊಬ್ಬರಿ ಬೆಲೆ ಇಳಿದಾಗ, ಮೊನ್ನೆ ಸಾನಂದ ಗೌಡರು ಮುಖ್ಯಮಂತ್ರಿಗಳಿದ್ದಾಗ ಇಲ್ಲಿ ಬೆಂಗಳೂರು ಸಿಟಿನಲ್ಲಿ 5 ಸಾವಿರ ರೈತರನ್ನು ಕರೆದುಕೊಂಡು ಬಂದು ಮೆರವಣಿಗೆ ಮಾಡಿದೆವು. ಶಿವಲಿಂಗೇಗೌಡರು ಅಲ್ಲಿಂದ

5 ಸಾವಿರ ಜನ ರೈತರನ್ನು ಕರೆದುಕೊಂಡು ಬಂದು, ಅವರಿಗೆಲ್ಲಾ ಊಟ ತಿಂಡಿಯೆಲ್ಲಾ ಕೊಡಿಸಿಕೊಂಡು, ಅವರೇ ಕೊಡಿಸಿದರೋ ಅಥವಾ ಜನರೆ ಹಾಕಿಕೊಂಡರೋ ಗೊತ್ತಿಲ್ಲ ಶಿವಲಿಂಗೇಗೌಡರನ್ನು ಕೇಳಬೇಕು, ಶಿವಲಿಂಗೇಗೌಡರು ಹೇಳಲಿಲ್ಲ. ಕೊನೆಗೆ ಏನಾಯಿತು ಗೊತ್ತಾ? ಏಳೂವರೆ ಸಾವಿರ ರೂಪಾಯಿಗೆ ಖರೀದಿ ಮಾಡುತ್ತೇವೆಂದು ಅವತ್ತು ಒಪ್ಪಂದ ಮಾಡಿದರು, ಅಲ್ಲಿ ನೋಡಿದರೆ ಶಿವಲಿಂಗೇಗೌಡರು ಮೂರು ಪಟ್ಟಿನಾಮ ಹಾಕಿಕೊಂಡು ಬಂದರು, ಏಳೂವರೆ ಸಾವಿರ ರೂಪಾಯಿ ಇಲ್ಲ ಏಳೂವರೆ ರೂಪಾಯಿಯೂ ಇಲ್ಲ, ಖರೀದಿನೇ ಆಗಲಿಲ್ಲ. ಆ ಪರಿಸ್ಥಿತಿಯಾಗುವುದು ಬೇಡ, ದಯಮಾಡಿ, ಏಕೆಂದರೆ, ಕಾನೂನು ಸಚಿವರು ಏನು ಹೇಳುತ್ತಾರೆಂದರೆ, ನಾವು ಇತರರಂತೆ ಅಲ್ಲ, ನಾವು ಈಗ ಖಡಕ್ ಆಗಿ ಹೇಳುತ್ತೇವೆ, ನಾವು ಯಾವುದೇ ಇದ್ದರೂ ಮಾಡುತ್ತೇವೆಂದರೆ ಮಾಡುತ್ತೇವೆಂದು ಹೇಳುತ್ತಾರೆ. ಏಕೆಂದರೆ, ಕಾನೂನು ಸಚಿವರ ಬಗ್ಗೆ ನನಗೆ ಗೌರವವಿದೆ, ಕೆಲವು ಸಮಯ ಅವರು ನಾವು ಜಗಳ ಆಡುತ್ತೇವೆ, ಆದರೂ ಕೂಡ ಕೆಲವು ಸಮಯ ಅವರ ಒಳ್ಳೆಯದಕ್ಕೋಸ್ಕರ ಹೇಳುತ್ತೇವೆ. ನೀವು ಇನ್ನು 5 ವರ್ಷವಿರುತ್ತೇವೆಂದು ಹೇಳಿದಿರಿ, ದೇಶಪಾಂಡೆ ಅವರೆ, 5 ಅಲ್ಲ, 10 ಅಲ್ಲ, 50 ವರ್ಷ ಕಾಂಗ್ರೆಸ್ ಅಧಿಕಾರದಲ್ಲಿತ್ತು, ಇನ್ನೂ 50 ವರ್ಷ ಅಧಿಕಾರದಲ್ಲಿ ಇರಿ ನಾವು ಬೇಡವೆಂದು ಹೇಳುವುದಿಲ್ಲ, ನಾವು ಇಲ್ಲೇ ಇರುತ್ತೇವೆ, ಆದರೆ ರೈತರ ಬಗ್ಗೆ ದಯಮಾಡಿ ನಿಗಾ ತೆಗೆದುಕೊಳ್ಳಿ. ಏಕೆಂದರೆ, ಜಯಚಂದ್ರ ಅವರು ರೈತರಾಗಿರುವುದರಿಂದ ಹೇಳುತ್ತೇನೆ ಪಾಪ ಶಾಮನೂರು ಶಿವಶಂಕರಪ್ಪನವರಿಗೆ ಏತಕ್ಕೆ ಆ ಖಾತೆ ಕೊಡುವುದಕ್ಕೆ ಹೋದಿರಿ? ಆ ಖಾತೆ ಕೊಟ್ಟು ಅವರನ್ನು ಈ ವಯಸ್ಸಿನಲ್ಲಿ, ಅವರ ಬಗ್ಗೆ ನನಗೆ ಗೌರವವಿದೆ, ಅವರು ನಮ್ಮ ತಂದೆ ಸಮಾನರಿದ್ದಂತೆ, ಅವರು ಒಂದು ತರಹ ಕಾಮಧೇನು ಕಲ್ಪವೃಕ್ಷವಿದ್ದಂತೆ, ಅವರಿಗೆ ಉನ್ನತ ಶಿಕ್ಷಣ, ನಗರಾಭಿವೃದ್ಧಿ ಅಥವಾ ಮೆಡಿಕಲ್ ಎಜ್ಯುಕೇಷನ್ ಖಾತೆ ಕೊಟ್ಟಿದ್ದರೂ ಒಪ್ಪಿಕೊಳ್ಳುತ್ತಿದ್ದೆ, ತೋಟಗಾರಿಕೆ ಖಾತೆ ಕೊಟ್ಟು, ನೀವು, ತೆಂಗಿನಕಾಯಿ, ಅಡಿಕೆ ಗಿಡ ಎಣಿಸಿ, ಆಲೂಗಡ್ಡೆದು ನೋಡಿ ಎಂದರೆ ಅವರು ಏನು ನೋಡುತ್ತಾರೆ? ಜಯಚಂದ್ರರವರೆ, ಪಶುಸಂಗೋಪನೆ ಖಾತೆಯನ್ನು ಹೆಚ್ಚುವರಿಯಾಗಿ ತೆಗೆದುಕೊಂಡಿದ್ದೀರಿ, ಈ ತೋಟಗಾರಿಕೆ ಖಾತೆಯನ್ನು ತೆಗೆದುಕೊಳ್ಳುವುದಕ್ಕೆ ತೊಂದರೆ ಏನು? ಪಕ್ಕದಲ್ಲಿರುವ ನಾಗರಾಜಯ್ಯನವರು, ನನ್ನದು 150 ಗಿಡ ಹೋಗಿವೆ ಎಂದು ಹೇಳುತ್ತಿದ್ದರು,

ನೀವು ಎಂಎಲ್‌ಎ ಆಗಿರುವುದರಿಂದ ನಿಮಗೆ ಪರಿಹಾರವಿಲ್ಲವೆಂದು ಹೇಳುತ್ತಿದ್ದೆ. ಅದಕ್ಕಾಗಿ ನಾನು ಹೇಳುವುದು, ದಯಮಾಡಿ ಅವರನ್ನು ಜವಾಬ್ದಾರರನ್ನಾಗಿ ಮಾಡಬೇಡಿ, ಏಕೆಂದರೆ, ಅವರ ಕೈಯಲ್ಲಿ ಸುಮ್ಮನೆ ಸಹಿ ಹಾಕಿಸಿ, ಅವರ ಮರ್ಯಾದೆಯನ್ನು ಏತಕ್ಕೆ ಹಾಳು ಮಾಡುತ್ತೀರಿ?

(ಈ ಸಂದರ್ಭದಲ್ಲಿ ಶ್ರೀ ಬಿ.ಆರ್. ಯಾವಗಲ್ ಅವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ರುದ್ರೇಶ್‌ಗೌಡರೆ, ನೀವು ಕಾಫಿ ತೋಟದವರು ತೆಂಗಿನಗಿಡದ ಬಗ್ಗೆ ನಿಮಗೇನು ಗೊತ್ತು ಕುಳಿತುಕೊಳ್ಳಿ. ಸರ್, ರುದ್ರೇಶ್ ಗೌಡರಿಗೆ ಕಾಫಿ ತೋಟದ ಬಗ್ಗೆ ಹೇಳಿ ಎಂದರೆ ಬೇಕಾದರೆ ಅವರು ಎಲ್ಲಾ ತರಹ ಹೇಳುತ್ತಾರೆ. ಏಕೆಂದರೆ, ಕೇಂದ್ರ ಮಂತ್ರಿಗಳನ್ನು ಮೂರು ಸಾರಿ ಕರೆದುಕೊಂಡು ಬಂದು ಏಲಕ್ಕಿ ಹಾರವೆಲ್ಲಾ ಹಾಕಿ, ಅವರೂ ಮೂರು ಪಟ್ಟೆ ನಾಮ ಹಾಕಿಸಿಕೊಂಡಿದ್ದಾರೆ. ಆದುದರಿಂದ ರುದ್ರೇಶ್ ಗೌಡರಿಗೆ ತೆಂಗಿನ ಗಿಡದ್ದು ಗೊತ್ತಿಲ್ಲವೆಂದು ಹೇಳಿದ್ದು, ಕಾಫಿದು, ಏಲಕ್ಕಿದ್ದು, ಕೇಳಿ ಹೇಳುತ್ತಾರೆ. ಕುಮಾರಸ್ವಾಮಿ ಕುಳಿತಿದ್ದಾರೆ, ಏಳೂವರೆ ಕೋಟಿ ಸಾಲ ಮನ್ನಾ ಮಾಡಿ ಎಂದು ಸದಾನಂದ ಗೌಡರು ಎಂಪಿ ಇದ್ದಾಗ ಪತ್ರ ಬರೆದರು, ಅವರು ಮುಖ್ಯಮಂತ್ರಿಗಳಾದ ಮೇಲೆ ನೀವೇ ಪತ್ರ ಬರೆದಿದ್ದೀರಲ್ಲಾ, ಏಳೂವರೆ ಕೋಟಿ ರೂಪಾಯಿಗಳನ್ನು ಮನ್ನಾ ಮಾಡಿ ಎಂದರೆ, ಸದಾನಂದ ಗೌಡರಿಗೆ ಉಸಿರೇ ಇಲ್ಲ, ನೋಡೋಣ, ಪರಿಶೀಲನೆ ಮಾಡುತ್ತೇವೆ ಎಂದರು. ಅರಕಲುಗೂಡು, ಸಕಲೇಶಪುರ, ಚಿಕ್ಕಮಗಳೂರು ಜಿಲ್ಲೆ ಎಲ್ಲಾ ಸೇರಿ ಏಲಕ್ಕಿ ಬೆಳೆಗಾರರದು ಏಳೂವರೆ ಕೋಟಿ ನಷ್ಟವಾಗಿದೆ. ದಯಮಾಡಿ ಜಯಚಂದ್ರ ಸಾಹೇಬರಿಗೆ ಹೇಳುವುದಿಷ್ಟೆ ಬಾಕಿ ಬೆಳೆಯದು ಇರಲಿ, ತೋಟಗಾರಿಕೆ ಬೆಳೆ ಬಗ್ಗೆ ಮೊದಲು ಆದ್ಯತೆಯನ್ನು ಕೊಡಬೇಕು. ಕೃಷಿ ಬಿಟ್ಟು ಹಾಕಿ ರಾಗಿ, ಅಕ್ಕಿ, ಗೋಧಿ ಬೇಕಾದರೆ ಎಷ್ಟು ದಿವಸಗಳಾದರೂ ಇಟ್ಟುಕೊಳ್ಳಬಹುದು, ನಮ್ಮ ಹಾಲಿನ ಡೈರಿ ಹೇಗೆ ಇದೆ ಹಾಗೆ ಪ್ರತಿ ದಿವಸ ರೈತರ ಹತ್ತಿರ ಬಂದು ತೆಗೆದುಕೊಂಡು ಹೋಗಿ ಹೊರದೇಶಕ್ಕೆ ರಫ್ತು ಮಾಡುವುದಾದರೆ ಹೊರದೇಶಕ್ಕೆ ಕಳುಹಿಸಿ ಕೋಲ್ಡ್ ಸ್ಟೋರೇಜ್ ನಲ್ಲಿ ಇಡುವುದಿದ್ದರೆ ಕೋಲ್ಡ್ ಸ್ಟೋರೇಜ್‌ನಲ್ಲಿ ಇಡಿ. ಬಿಜಾಪುರದಲ್ಲಿ ದ್ರಾಕ್ಷಿಯನ್ನು ಹೆಚ್ಚಿಗೆ ಬೆಳೆಯುವುದು, ಅಂತಹಕ್ಕೆಲ್ಲಾ ಆದ್ಯತೆ ಕೊಡಿ. ತೋಟಗಾರಿಕೆ ಬೆಳೆ ಎಂದರೆ, ಬರೀ ತೆಂಗು, ಆಲೂಗಡ್ಡೆ, ಟೊಮ್ಯಾಟೊ ಎಂದಲ್ಲ ಯಾವಯಾವ

ಹಣ್ಣಿನ ಪದಾರ್ಥಗಳಿವೆ ಅವೆಲ್ಲಾ ಸೇರುತ್ತವೆ. ಅದಕ್ಕೆ ಆದ್ಯತೆ ಕೊಟ್ಟು ನಿವೃತ್ತ ಅಧಿಕಾರಿಗಳ ಒಂದು ಟೀಂ ಮಾಡಿ, ಎಲ್ಲೆಲ್ಲೋ ಸರ್ಕಾರ ಲಕ್ಷಾಂತರ ರೂಪಾಯಿಗಳನ್ನು ಕಳೆಯುತ್ತದೆ. ಕೆಲಸ ಮಾಡುವವರಿದ್ದಾರೆ, ಹಿಂದೆ ಚೆನ್ನಪ್ಪ ಗೌಡರೆಂದು ತೋಟಗಾರಿಕೆ ಇಲಾಖೆಯಲ್ಲಿದ್ದರು, ಒಳ್ಳೆಯ ಅಧಿಕಾರಿ, ಅಂತಹ 4 ಜನರನ್ನು ತೆಗೆದುಕೊಳ್ಳಿ. ಜೆಡಿ(ಎಸ್) ಅಧಿಕಾರಿಗಳು ಬೇಡವೆಂದರೆ ಬೇಕಾದರೆ ಕಾಂಗ್ರೆಸ್‌ನವರು ಯಾರಾದರು ನಿವೃತ್ತರಾದವರು ಇದ್ದರೆ ಇಟ್ಟುಕೊಳ್ಳಿ.

ಶ್ರೀ ಡಿ.ಎನ್.ಜೀವರಾಜ್ : ನೀವು ಹೇಳಿದ್ದಕ್ಕೆ ನಾನು ಹೇಳಿದ್ದು.

ಶ್ರೀ ಹೆಚ್.ಡಿ.ರೇವಣ್ಣ : ನಿಮ್ಮದು ತೋಟ ಕಡಿಯುತ್ತಾರೆಂದು ಹೇಳುತ್ತಿದ್ದಾರೆ, ನೀವು ಅದನ್ನು ಕೇಳುವುದು ಬಿಟ್ಟು, ನೋಡಿ ಆ ಬಿಜೆಪಿ ಸರ್ಕಾರವಿದ್ದಾಗಲೂ ಎದ್ದು ನಿಂತುಕೊಳ್ಳುತ್ತಿದ್ದರು, ಏಕೆ ಇವರು ಸುಮ್ಮನೆ ಮಧ್ಯದಲ್ಲಿ interfere ಆಗುತ್ತಾರೆ; ದಯಮಾಡಿ ಅಧ್ಯಕ್ಷರು ನಮ್ಮ ಸಪೋರ್ಟಿವಾಗಿ ಬಂದು ಅವರಿಗೆ ಹೇಳಬೇಕಾಗುತ್ತದೆ. ನಮ್ಮ ಜೀವರಾಜ್ ಅವರಿಗೆ ಪೂರ್ತಿ ಮಾತನಾಡುವುದಕ್ಕೆ ಅವಕಾಶ ಕೊಡಿ ನಾವು ಬೇಡವೆನ್ನುವುದಿಲ್ಲ. ನಾನು ಬೆಳಿಗ್ಗೆ ಮಾತನಾಡುವಾಗ, ಅವರು ನಮ್ಮ ತೋಟ ಕಡಿಯುತ್ತಿದ್ದಾರೆಂದು ಹೇಳಿದರು, ತೋಟ ಕಡಿಯುವುದನ್ನು ನಿಲ್ಲಿಸಬೇಡಿ ಎಂದು ಹೇಳಿದ್ದೇವೆಯೇ? ದಯಮಾಡಿ ಅರ್ಥ ಮಾಡಿಕೊಂಡು ಸರ್ಕಾರ ತೋಟಗಾರಿಕೆ ಬೆಳೆಗೆ ಪ್ರಾಮುಖ್ಯತೆಯನ್ನು ಕೊಡಬೇಕು, ಯಾವುದೇ ಬೆಳೆ ಇರಬಹುದು, ಒಂದು ಐನೂರು ಕೋಟಿ ರೂಪಾಯಿ ಇಡಿ. ನೀವು ಒಂದು ರೂಪಾಯಿಗೆ ಕೆಜಿ ಅಕ್ಕಿ ಕೊಡುತ್ತೇವೆಂದು ಹೇಳಿದಿರಿ, ಸಂತೋಷ, ನಾವು ಬೇಡವೆನ್ನುವುದಿಲ್ಲ. ಒಂದು ರೂಪಾಯಿಗೆ ಕೆಜಿ ಅಕ್ಕಿ ಕೊಡುವ ಕಾರ್ಯಕ್ರಮಕ್ಕೆ ಎರಡೂವರೆ ಸಾವಿರ ಕೋಟಿ Invest ಮಾಡುತ್ತಿದ್ದೀರಿ, ಯಾವ ರೈತರೂ ಒಂದು ರೂಪಾಯಿಗೆ ಕೆಜಿ ಅಕ್ಕಿ ಕೊಡಿ ಎಂದು ನಿಮ್ಮ ಹತ್ತಿರ ಕೇಳುವುದಕ್ಕೆ ಬಂದಿರಲಿಲ್ಲ, ಅದಕ್ಕೆ ಎರಡೂವರೆ ಸಾವಿರ ಕೋಟಿ ಕೊಡುವಾಗ ತೋಟಗಾರಿಕೆ ಬೆಳೆಗೆ ಐನೂರು ಕೋಟಿ ಇಡಿ. ಯಾವ ಬೆಳೆ ನಷ್ಟವಾಗುತ್ತದೆ ಅದಕ್ಕೆ ನೀವು ಮಧ್ಯ ಪ್ರವೇಶ ಮಾಡಿ ಖರೀದಿ ಮಾಡಿ. ದೇವೇಗೌಡರು ಪ್ರಧಾನಮಂತ್ರಿಗಳಾಗಿದ್ದಾಗ ಉದಾಹರಣೆಗೆ ಹೇಳುವುದಾದರೆ, ಆಲೂಗಡ್ಡೆ ಬೆಳೆಗೆ ಇಲ್ಲೇ ಬೆಂಗಳೂರಿನ ಮಾರುಕಟ್ಟೆಯಲ್ಲಿ ನಾನೂರು ರೂಪಾಯಿ ಇತ್ತು ನೂರ ಐವತ್ತು ರೂಪಾಯಿಗೆ ಕೊಟ್ಟು ಹೋಗಿದ್ದ.

ಶ್ರೀ ಶಾಮನೂರು ಶಿವಶಂಕರಪ್ಪ (ತೋಟಗಾರಿಕೆ ಸಚಿವರು) : ಅದಕ್ಕೆ ಸಾವಿರ ಕೋಟಿ ಇದೆ.

ಶ್ರೀ ಹೆಚ್.ಡಿ.ರೇವಣ್ಣ : ಸಾವಿರ ಕೋಟಿ ಇದ್ದರೆ ಯಾವಯಾವ ವರ್ಷದಲ್ಲಿ ಎಷ್ಟು ಖರ್ಚು ಮಾಡಿದ್ದೀರೆಂದು ಸರ್ ದಯಮಾಡಿ ಉತ್ತರ ಕೊಡುವಾಗ ತಿಳಿಸಿ ಒಂದು ದಿವಸ ಇದೇ ರೀತಿ ಒಬ್ಬ ರೈತ ನಾನೂರು ರೂಪಾಯಿ ಬೆಲೆ ಇರುವುದನ್ನು ನೂರೈವತ್ತು ರೂಪಾಯಿಗೆ ಆಲೂಗಡ್ಡೆ ಮಾರಿ ವಿಷ ತೆಗೆದುಕೊಂಡ. ದೇವೇಗೌಡರು ಬೆಂಗಳೂರಿನಲ್ಲಿ ಒಂದು ಸಭೆ ಮಾಡಿದರು, ಕೇಂದ್ರ ಸರ್ಕಾರ ಮಧ್ಯಪ್ರವೇಶ ಮಾಡಿದ್ದರಿಂದ ಮಾರನೆ ದಿವಸ ಬೆಳಿಗ್ಗೆಯೇ ರೂ.500 ಆಯಿತು, ಆದುರಿಂದ, ಮಾರುಕಟ್ಟೆ ಪ್ರವೇಶವನ್ನು ರಾಜ್ಯ ಸರ್ಕಾರ ಮಾರ್ಕೆಟಿಂಗ್ ಫೆಡರೇಷನ್ ಕಡೆಯಿಂದಲಾದರೂ ಮಾಡಿ, NAFED ನಿಂದಲಾದರೂ ಮಾಡಿ, ಲಾಸ್ ಆದರೆ ರಾಜ್ಯ ಸರ್ಕಾರವೇ ಕಟ್ಟಿ ಕೊಡಲಿ. ಅದನ್ನು ಮಾಡಬೇಕೆಂದು ಒತ್ತಾಯ ಮಾಡಿ, ತೆಂಗಿನ ಬೆಳೆ ಚನ್ನರಾಯಪಟ್ಟಣ ತಾಲ್ಲೂಕು ಇರಬಹುದು, ಹಾಸನ, ಹೊಳೆನರಸೀಪುರ, ಕಡೂರು, ಹಾಗೂ ತುಮಕೂರು ಜಿಲ್ಲೆ ಇರಬಹುದು, ತುಮಕೂರು ಜಿಲ್ಲೆ ಎಂದರೆ ತುರುವೇಕೆರೆ ಚಿಕ್ಕನಾಯಕನಹಳ್ಳಿ ಎಲ್ಲಾ ಬರುತ್ತವೆ. ಸಿರಾನೂ ಬರುತ್ತದೆ. ಸಿರಾಗೆ ಪಿಯಾರಿಟಿ ಕೊಡಿ. ದಯಮಾಡಿ ಇದಕ್ಕೆ ಟಾಪ್ ಪಿಯಾರಿಟಿ ಕೊಟ್ಟು ರೈತರಿಗೆ ಎಷ್ಟು ಲುಕ್ಸಾನು ಆಗಿದೆ ಅಷ್ಟಕ್ಕೂ 100% ಪರಿಹಾರ ಕೊಡಬೇಕೆಂದು ಮನವಿ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ.ಬಿ.ಸುರೇಶ್‌ಬಾಬು (ಚಿಕ್ಕನಾಯಕನಹಳ್ಳಿ) : ಮಾನ್ಯ ಅಧ್ಯಕ್ಷರೆ, ಇದಕ್ಕೆ ಪೂರಕವಾಗಿ ಆಕಸ್ಮಿಕವಾಗಿ ರೈತರ ಕೊಬ್ಬರಿ ಶೆಡ್‌ಗಳಿಗೆ ಬೆಂಕಿ ಬಿದ್ದಂತಹ ಸಂದರ್ಭದಲ್ಲಿ ಅವರಿಗೆ ಏನೂ ಕೂಡ ಪರಿಹಾರ ಸಿಗುತ್ತಿಲ್ಲ. ತೋಟ ಏನಾದರೂ ನಾಶ ಆದರೆ 50% ಮೇಲೆ ನಾಶ ಆದರೆ ಅದಕ್ಕೆ ಪರಿಹಾರ ಇದೆ ಎಂದು ಹೇಳುತ್ತಾರೆ. ದಯಮಾಡಿ ಇದನ್ನು ಸ್ವಲ್ಪ ಮಾರ್ಪಾಟು ಮಾಡಿ, ರೈತರಿಗೆ ಏನಾದರೂ ನಷ್ಟವಾದರೆ ಅದಕ್ಕೆ ಬೆಂಬಲವಾಗಿ ಸರ್ಕಾರ ಏನಾದರೂ ಪರಿಹಾರ ಕೊಡುವ ರೀತಿಯಲ್ಲಿ ಮಾರ್ಪಾಟು ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಷಡಕ್ಷರಿ(ತಿಪಟೂರು) : ಮಾನ್ಯ ಅಧ್ಯಕ್ಷರೆ, ರಾಜ್ಯದಲ್ಲಿ ತೆಂಗು ಹೆಚ್ಚು ಬೆಳೆಯುತ್ತಿರತಕ್ಕಂತಹ ಪ್ರದೇಶ ತುಮಕೂರು ಜಿಲ್ಲೆ. ಅದರಲ್ಲಿಯೂ ತೆಂಗು

ಇಡೀ ರಾಷ್ಟ್ರದಲ್ಲಿ ಹೆಸರು ಪಡೆದಿರುವುದು ತಿಪಟೂರು ತೆಂಗು ಎಂದು. ತೆಂಗು ಬೆಳೆ ನಾಶ ಮತ್ತು ಬೆಲೆ ಬಗ್ಗೆ ಇವತ್ತು ಈ ಸದನದಲ್ಲಿ ಪ್ರಸ್ತಾಪವಾಗಿದೆ. ಬಹಳಷ್ಟು ಜನ ನಮ್ಮ ಹಿರಿಯ, ಕಿರಿಯ ಸ್ನೇಹಿತರು ಮಾತನಾಡಿದ್ದಾರೆ.ಇವತ್ತು ತೆಂಗು ತುಮಕೂರು ಜಿಲ್ಲೆಯಲ್ಲಿ ಸುಮಾರು 150 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಬೆಳೆಯುತ್ತಾರೆ. ಅದರಲ್ಲಿ ಸುಮಾರು 40 ಭಾಗ ತೆಂಗಿನ ಮರ ಹಾಳಾಗಿ ಹೋಗಿದೆ. ಒಂದು ತೆಂಗಿನ ಮರ ಫಲ ಕೊಡುವುದಕ್ಕೆ ಸುಮಾರು 8 ರಿಂದ 10 ವರ್ಷಗಳು ಬೇಕಾಗುತ್ತದೆ. ಛೇರ್ಮನ್ ಜೋಷಾಗಿ ಹೇಳಿ ನೀವು ಸಹಿ ಮಾಡಿಲ್ಲ ಶ್ರೀ ಕೆ.ಷಡಕ್ಷರಿ ಕೇಂದ್ರ ತೆಂಗು ಅಭಿವೃದ್ಧಿ ಮಂಡಲಿಯವರು ಒಂದು ಸರ್ವೇ ಮಾಡುತ್ತಿದ್ದಾರೆ. ಆ ಸರ್ವೇ ರಿಪೋರ್ಟ್ ಬಂದ ಮೇಲೆ ರಾಜ್ಯ ಸರ್ಕಾರ ನಾಶವಾಗುತ್ತಿರತಕ್ಕಂತಹ ಒಂದು ತೆಂಗಿನ ಗಿಡಕ್ಕೆ ಕನಿಷ್ಠ 10,000 ರೂಪಾಯಿಗಳ ಪರಿಹಾರಧನವನ್ನು ಕೊಡಬೇಕಾಗುತ್ತದೆ. ಕೊಬ್ಬರಿ ಬೆಲೆ ಬಗ್ಗೆ ಹೇಳಬೇಕೆಂದರೆ, ಹಿಂದಿನ ವರ್ಷದಿಂದ ನಾಫೆಡ್ ವತಿಯಿಂದ ಕೊಬ್ಬರಿಯನ್ನು ಖರೀದಿ ಮಾಡಿಕೊಂಡು ಬರುತ್ತಿದ್ದಾರೆ. ಹೋದವರ್ಷ ಸುಮಾರು 5350 ರೂಪಾಯಿ ಇತ್ತು. ಈಗ 2013–14ನೇ ಸಾಲಿಗೆ 5500 ರೂಪಾಯಿಯನ್ನು ನಿಗಧಿ ಮಾಡಿದ್ದಾರೆ. ಸಹಕಾರಿ ಮಾರಾಟ ಮಹಾ ಮಂಡಳದಿಂದ ಈಗಾಗಲೇ ಖರೀದಿ ಪ್ರಾರಂಭ ಮಾಡುವುದಕ್ಕೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಈಗಾಗಲೇ ಪ್ರಚಾರ ಸಹ ಮಾಡಿದ್ದಾರೆ. ನಾನು ಅಲ್ಲಿ ನಿರ್ದೇಶಕನಾಗಿದ್ದೇನೆ. ನಾನು ಕೇಳತಕ್ಕಂಥದ್ದು, ಸರ್ಕಾರ ದಯಮಾಡಿ ಹಿಂದೆ ಕೊಬ್ಬರಿ ಬೆಳೆಗೆ ಪ್ರೋತ್ಸಾಹಧನ 700 ರೂಪಾಯಿ ಕೊಡುತ್ತಿದ್ದರು. ಕನಿಷ್ಠ ಒಂದು ಸಾವಿರ ರೂಪಾಯಿಯಾದರೂ ಬೆಂಬಲ ಬೆಲೆ ಆಗಿ ಇವತ್ತು ಸರ್ಕಾರ ಒಪ್ಪಿಕೊಂಡು ಘೋಷಣೆ ಮಾಡಿದರೆ ರೈತರಿಗೆ ಸಹಾಯವಾಗುತ್ತದೆ.

(ಗೊಂದಲ)

ಶ್ರೀ ಕೆ.ಷಡಕ್ಷರಿ : ನಾವು ಐದು ಸಾವಿರ ಕೇಳೋಣ, ಸರ್ಕಾರದವರು ಕೊಡಬೇಕಲ್ಲ.

(ಈ ಹಂತದಲ್ಲಿ ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

(ಗೊಂದಲ)

ಅಧ್ಯಕ್ಷರು : ಒಬ್ಬೊಬ್ಬರೇ ಮಾತನಾಡಿ. ತಾವು ಯಾರೂ ನೋಟಿಸ್‌ಗೆ ಸಹಿ ಹಾಕಿಲ್ಲ. ನೋಟಿಸ್‌ಗೆ ರುಜು ಹಾಕಿದವರಿಗೆ ಅವಕಾಶ ಮಾಡಿ ಕೊಟ್ಟಿದ್ದೇವೆ. ಸಹಿ ಇಲ್ಲದವರಿಗೆ ಹೇಗೆ ಅವಕಾಶ ಕೊಡುವುದಕ್ಕಾಗುತ್ತದೆ?

ಶ್ರೀ ಕೆ.ಷಡಕ್ಷರಿ : ಹಿಂದಿನ ಸಾಲಿನಲ್ಲಿ ಸುಮಾರು ಏಳು ಕೋಟಿ ರೂಪಾಯಿ ಬಿಡುಗಡೆ ಆಗಿತ್ತು ಅದರಲ್ಲಿ 6.85 ಲಕ್ಷ ಖರ್ಚಾಗಿದೆ. ತುರ್ತಾಗಿ 10 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿ ಇವತ್ತು ಕೊಬ್ಬರಿ ಖರೀದಿ ಮಾಡುವ ಪ್ರಕ್ರಿಯೆಯನ್ನು ಪ್ರಾರಂಭ ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಬೇಗ ಮುಗಿಸಿ. ನಾನು ಎರಡು ಗಂಟೆಗೆ ಸದನ ಮುಕ್ತಾಯಗೊಳಿಸಬೇಕು.

ಶ್ರೀ ಡಿ.ನಾಗರಾಜಯ್ಯ (ಕುಣಿಗಲ್) : ಮಾನ್ಯ ಅಧ್ಯಕ್ಷರೆ, ಇವತ್ತು ಇಡೀ ರಾಜ್ಯದಲ್ಲಿ ತೆಂಗಿನ ಬೆಳೆ ಬೆಳೆಯುತ್ತಿರತಕ್ಕಂತಹ ರೈತರ ಸ್ಥಿತಿ ಹೇಳತೀರದಾಗಿದೆ. ತೆಂಗಿನ ಬೆಳೆ ಒಂದೇ ಅಲ್ಲ, ತೆಂಗಿನ ಬೆಳೆ ಜೊತೆಗೆ ಅಡಿಕೆ ಬೆಳೆ ಸಹ ಸಾವಿರಾರು ಎಕರೆಯಲ್ಲಿ ಹಾಳಾಗಿದೆ. ತೆಂಗಿನ ಬೆಳೆ ಖರೀದಿಸುವುದಕ್ಕೆ ಏನು ಬೆಂಬಲ ಬೆಲೆ ಕೊಡಿ ಎಂದು ಹೇಳುತ್ತಿದ್ದೇವೋ ಬೆಂಬಲ ಬೆಲೆ ಕೊಡುವುದರಿಂದ ತಾತ್ಕಾಲಿಕವಾದ ಪರಿಹಾರ ಆಗುತ್ತದೆಯೇ ವಿನಃ ಶಾಶ್ವತವಾದ ಪರಿಹಾರ ಆಗುವುದಿಲ್ಲವೆಂದು ನನ್ನ ಭಾವನೆ. ಇವತ್ತು ತೆಂಗಿನ ಮರಗಳು ಹಾಳಾಗಿವೆ ಒಂದು ತೆಂಗಿನ ಸಸಿಯನ್ನು ನೆಟ್ಟು ಆ ಸಸಿ ನಮಗೆ ಫಲ ಕೊಡುವುದಕ್ಕೆ ಸುಮಾರು 10 ವರ್ಷಗಳ ಕಾಲ ಬೇಕು. ಇವತ್ತು ಹಾಳಾಗಿರತಕ್ಕಂತಹ ಪ್ರದೇಶದಲ್ಲಿ ನಾವು ಮತ್ತೆ ತೆಂಗಿನ ಸಸಿಗಳನ್ನು ನೆಟ್ಟು ಆ ತೆಂಗಿನ ಸಸಿ ಬೆಳೆಯುವುದಕ್ಕೆ 10 ವರ್ಷ ಕಾಯಬೇಕಾಗಿರುವುದು ನೋವಿನ ಸಂಗತಿ. ಆ ಕಾರಣಕ್ಕಾಗಿ ತೆಂಗಿನ ಮರಕ್ಕೆ ಒಂದು ಎಕರೆಗೆ ಇಷ್ಟು ಎಂದು ಹೇಳಿ ಹಣ ನಿಗಧಿ ಮಾಡುವುದರ ಮುಖಾಂತರ ಹಾಳಾಗಿರತಕ್ಕಂತಹ ಮರಗಳಿಗೆ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕು ಎನ್ನುವಂಥದ್ದು ಅದೇ ರೀತಿ ಅಡಿಕೆ ಮರಕ್ಕೂ ಪರಿಹಾರ ಕೊಡುವುದಕ್ಕೆ ವ್ಯವಸ್ಥೆ ಮಾಡುವುದು ಜೊತೆಗೆ ತೆಂಗು ಮತ್ತು ಅಡಿಕೆಗೆ ಬೆಂಬಲ ಬೆಲೆ ಕೊಡುವುದರ ಮುಖಾಂತರ ಇವತ್ತು ಸಂಕಷ್ಟದಲ್ಲಿರತಕ್ಕಂತಹ ರೈತರ ಪರಿಹಾರಕ್ಕೆ ಸರ್ಕಾರ ಮುಂದೆ ಬರಬೇಕೆಂದು ಹೇಳವುದರ ಜೊತೆಗೆ ನಮ್ಮ ಇಡೀ ತುಮಕೂರು ಜಿಲ್ಲೆಯಲ್ಲಿ ಸುಮಾರು 1.5

ಲಕ್ಷ ಹೆಕ್ಟೇರ್ ತೆಂಗಿನ ಗಿಡಗಳಿವೆ. ಈ ಪ್ರದೇಶವೆಲ್ಲಾ ಬಯಲು ಸೀಮೆಯಲ್ಲಿದೆ. ಅದಕ್ಕೆ ನೀರಾವರಿ ಇಲ್ಲ.

ಅಧ್ಯಕ್ಷರು : ಪರಿಹಾರ ಏನು, ಅಷ್ಟಕ್ಕೆ ಸೀಮಿತವಾಗಿ ಹೇಳಿ.

ಶ್ರೀ ಡಿ.ನಾಗರಾಜಯ್ಯ : ಹಾಳಾಗಿರತಕ್ಕಂತಹ ತೆಂಗಿನ ಗಿಡಗಳಿಗೂ ಸಹ ಪರಿಹಾರ ಕೊಡತಕ್ಕಂಥದ್ದಕ್ಕೆ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ನನ್ನ ಒತ್ತಾಯ.

ಶ್ರೀ ಎಂ.ಟಿ. ಕೃಷ್ಣಪ್ಪ (ತುರುವೇಕೆರೆ) : ಮಾನ್ಯ ಅಧ್ಯಕ್ಷರೆ, ಮಾನ್ಯ ಟಿ.ಕೆ. ಜೇಕಬ್ ಛೇರ್ಮನ್, Coconut Development Board ನವರು ನಮ್ಮ Horticulture Department ನ ಪ್ರಧಾನ ಕಾರ್ಯದರ್ಶಿಯವರಿಗೆ ಒಂದು ಪತ್ರ ಬರೆದಿದ್ದಾರೆ. ಅವರು ಕೆಲವು ಸಲಹೆಗಳನ್ನು ಕೊಟ್ಟಿದ್ದಾರೆ. ಬಹಳ ಮುಖ್ಯವಾಗಿ ನಾವು ನಾಫೆಡ್ ಓಪನ್ ಮಾಡಿ ಸಾವಿರ–ಐನೂರು ರೂ.ಪರಿಹಾರ ಕೊಡಿ ಎಂದು ಬಾರ್ಗೇನ್ ಏನು ನಡೆಯುತ್ತಿದೆ, ಅವರು ಮುಖ್ಯವಾಗಿ ಏನು ಸಲಹೆ ಕೊಟ್ಟಿದ್ದಾರೆಂದರೆ, ಬೇರೆ ಬೇರೆ ರಾಷ್ಟ್ರಗಳಲ್ಲಿ ನಮಗಿಂತ ಹೆಚ್ಚು ಹೆಚ್ಚು ಕೊಬ್ಬರಿ ಬೆಳೆಯುತ್ತಿದ್ದಾರೆ. ಶ್ರೀಲಂಕಾ, ಇಂಡೋನೇಷಿಯಾ, ಫಿಲಿಪೈನ್ಸ್, ಮಲೇಷಿಯಾ, ಥೈಲ್ಯಾಂಡ್ ನಲ್ಲಿ ಬೆಳೆಯುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಸದಸ್ಯರಲ್ಲಿ ನನ್ನ ವಿನಂತಿ, ದಯವಿಟ್ಟು ಪರಿಹಾರ ಏನು ಮಾಡಬೇಕೆಂದು ಹೇಳಿ. ಅಲ್ಲಿ ಸಾವಿರ ಇರಬಹುದು, ಇಲ್ಲಿ ಏನು ಮಾಡಬೇಕು ಹೇಳಿ.

ಶ್ರೀ ಎಂ.ಟಿ.ಕೃಷ್ಣಪ್ಪ : ಅವರು ಏನು ಸಲಹೆ ಕೊಟ್ಟಿದ್ದಾರೆಂದರೆ, ಕೊಬ್ಬರಿ ಬೆಳೆ ಎಲ್ಲಿ ಹೆಚ್ಚಾಗಿ ಬೆಳೆಯುತ್ತದೆ. ಅಲ್ಲಿ ನೀರಾ ತಯಾರು ಮಾಡುವುದರ ಮುಖಾಂತರ ಬೆಲ್ಲ ಮತ್ತು ಸಕ್ಕರೆ ಎರಡನ್ನೂ ತಯಾರು ಮಾಡಬಹುದು. ಆದರಿಂದ ರೈತರು ಆರ್ಥಿಕವಾಗಿ ಬಲಿಷ್ಠರಾಗುತ್ತಾರೆ. ಜೊತೆಗೆ ಮಾರುಕಟ್ಟೆ ಸುಧಾರಣೆಯಾಗುತ್ತದೆ ಎಂದು ಅವರು ಒಂದು ಸಲಹೆ ಕೊಟ್ಟಿದ್ದಾರೆ. ಸರ್ಕಾರವೇ ಮಾಡಿ ಎಂದು ಹೇಳಲಿಲ್ಲ. Co-operative Society ಮುಖಾಂತರ, ಪಂಚಾಯಿತಿಯವರು Co-operative Society ಮಾಡಿ ಅಲ್ಲಿ ನೀರಾವನ್ನು ಕ್ರೋಡೀಕರಿಸಿ ಅವರು ಏನು technology ಮಾಡಿದ್ದಾರೆ ಅದೇ ರೀತಿ ಇಲ್ಲಿಯೂ ಸಹ introduce ಮಾಡಿ ಇದರ ಮೂಲಕ ಸುಮಾರು ಸಾವಿರಾರು ಜನ ಹಳ್ಳಿ ರೈತರಿಗೆ ಕೆಲಸ ಸಿಗುತ್ತದೆ. ಹೆಣ್ಣು ಮಕ್ಕಳು ಇರಬಹುದು,

ಬೇರೆಯವರು ಇರಬಹುದು, ಆ ಒಂದು ಸ್ಕೀಮ್ ಜಾರಿ ಮಾಡಿ ಎಂದು ಸುಮಾರು 08.10.2012ರಲ್ಲಿ ಪತ್ರ ಬರೆದಿದ್ದಾರೆ. ಅದರ ಬಗ್ಗೆ ಸರ್ಕಾರ ಈಗ ಗಮನ ಹರಿಸಿದರೆ ಬಹುತೇಕವಾಗಿ ತೆಂಗು ಬೆಳೆ ರೈತರಿಗೆ ಬಹಳ ಅನುಕೂಲವಾಗುತ್ತದೆ. ಹಾಗಾಗಿ ನಾನು ತಮ್ಮ ಮೂಲಕ ಸರ್ಕಾರಕ್ಕೆ ವಿನಂತಿ ಮಾಡುವುದೇನೆಂದರೆ, ಅದನ್ನು ಯಾವುದಾದರೂ ಒಂದು ತಾಲ್ಲೂಕಿನಲ್ಲಿ ಪ್ರಾಯೋಗಿಕವಾಗಿ ತೆಗೆದುಕೊಂಡರೆ ಬಹುಶಃ effective ಆಗಿ ಈ ರಾಜ್ಯದಲ್ಲಿ ಕಾರ್ಯಗತ ಮಾಡಿದರೆ ಇದಕ್ಕೆ ಒಂದು ಶಾಶ್ವತವಾದ ಪರಿಹಾರ ಸಿಗುತ್ತದೆ. ಅದಾಗಿ ಸುಮಾರು ಒಂದು ವರ್ಷ ಕಳೆದರೂ ಸಹ ಸರ್ಕಾರದಲ್ಲಿ ಹಾಗೇಯೇ ಉಳಿದಿದೆ. He is the chairman of the Coconut Board. ಅವರೇ ಸಲಹೆ ಮಾಡಿರತಕ್ಕಂತಹ ಸಲಹೆಯನ್ನು ಸರ್ಕಾರ ಎಲ್ಲೋ ಒಂದು ಹಂತದಲ್ಲಿ ಹಳ್ಳಿ ರೈತರ ಬಗ್ಗೆ ಗಮನ ಹರಿಸಿ ಮಾಡಿದರೆ ಇದಕ್ಕೆ ಒಂದು ದೊಡ್ಡ ಪರಿಹಾರ ಸಿಗುತ್ತದೆ ಎಂದು ನನ್ನ ಅನಿಸಿಕೆ. ತಾವೇನಾದರೂ ಅದರ ಬಗ್ಗೆ Co-operative union ಮುಖಾಂತರ ಮಾಡಿದರೆ ರಾಜ್ಯದಲ್ಲಿ ಒಳ್ಳೆಯ ಪರಿಹಾರ ಆಗುತ್ತದೆ ಎಂದು ನನ್ನ ಸಲಹೆ. ರೂ.500, ರೂ.1000 ಬೆಂಬಲ ಬೆಲೆ ಕೊಟ್ಟರೆ ಆಗುವುದಿಲ್ಲ. ಕೊನೇ ಪಕ್ಷ 2000 ರೂ.ಬೆಂಬಲ ಬೆಲೆಯನ್ನು ಕೊಡಬೇಕಾಗುತ್ತದೆ. ಕಳೆದ ಬಾರಿ ರೂ.8600 ಕ್ಕೆ ರೆಕಮಂಡ್ ಮಾಡಿದರು.

ಅದರ ಬಗ್ಗೆ ಏನಾಯಿತೋ ಇದುವರೆಗೂ ಗೊತ್ತಿಲ್ಲ. ಕಳೆದ ಬಾರಿ ಈ ವಿಚಾರದ ಬಗ್ಗೆ ಡಿಬೇಟ್‌ನಲ್ಲಿ ಪಾರ್ಟಿಸಿಪೇಟ್ ಮಾಡಿದಾಗ ಕಳೆದ ಬಿ.ಜೆ.ಪಿ. ಸರ್ಕಾರವಿದ್ದಾಗ 8,600 ರೂ.ಗಳ ಬೆಂಬಲ ಬೆಲೆಯನ್ನು ಕೊಡಬೇಕೆಂದು ನಾಫೇಡ್‌ಗೆ ರೆಕಮೆಂಡ್ ಮಾಡಿದ್ದರು. ಅದು ಏನಾಯಿತು ಎಂಬ ಬಗ್ಗೆ ಇದುವರೆಗೂ ಮಾಹಿತಿಯಿಲ್ಲ. ದಯಮಾಡಿ ತಮ್ಮ ಮೂಲಕ ಮಾನ್ಯ ಸಚಿವರಿಗೆ ವಿನಂತಿಸುವುದೇನೆಂದರೆ, ಮತ್ತೊಮ್ಮೆ ಅದು ಏನಾಯಿತು ಎಂಬ ಬಗ್ಗೆ ನೋಡಬೇಕು. ಕೇಂದ್ರ ಸರ್ಕಾರದಲ್ಲಿ ಹೇಳಿರುವ 5500 ರೂಪಾಯಿ ಬಹಳ ಕಡಿಮೆ ಮೊತ್ತ. ಕಡೆಯ ಪಕ್ಷ ಸರ್ಕಾರ 8600 ರೂಪಾಯಿ ಎಂದು ಏನು ರೆಕಮೆಂಡ್ ಮಾಡಿದ್ದಾರೋ ಅಷ್ಟಾದರೂ ಕೊಟ್ಟು ಜೊತೆಗೆ ಸರ್ಕಾರ ಸಹ ಕೊಟ್ಟರೆ ಬಹುಶಃ ರೈತರಿಗೆ ಸಹಾಯವಾಗುತ್ತದೆ. ಎಲ್ಲೆಲ್ಲಿ ತೆಂಗಿನ ಮರವಿದೆಯೋ ಅಲ್ಲೆಲ್ಲಾ ತೊಂದರೆಯಾಗಿದೆ. ಉದಾಹರಣೆಗೆ ಹೇಳಬೇಕೆಂದರೆ

ನಮ್ಮ ದೊಡ್ಡ ಗದ್ದೆ ಹೋಬಳಿಯಲ್ಲಿ ಸಿದ್ದೇಗೌಡರು ಎನ್ನುವವರಿದ್ದಾರೆ, ಅವರು ಬೆಳೆದಿರುವ 5 ಸಾವಿರ ತೆಂಗಿನ ಮರಗಳು ಒಣಗಿ ಹೋಗಿವೆ.

ಶ್ರೀ ಗೋವಿಂದ ಎಂ.ಕಾರಜೋಳ : ಸನ್ಮಾನ್ಯ ಅಧ್ಯಕ್ಷರೆ, ಬೆಲ್ಲ, ಸಕ್ಕರೆಯನ್ನು ತಯಾರು ಮಾಡಬಹುದು ಎನ್ನುವ ವಿಚಾರವನ್ನು ಪ್ರಸ್ತಾಪ ಮಾಡಿದರು. ಅದರಲ್ಲಿ ಪರ್ಸೆಂಟೇಜ್ ಎಷ್ಟು ಇರುತ್ತದೆ, ಸಕ್ಕರೆ ಪ್ರಮಾಣ ಎಷ್ಟಿರುತ್ತದೆ ಎಂಬುದು ಬಹಳ ಮಹತ್ವದ್ದು. ಈಗ ನಾವು ಕಬ್ಬನ್ನು ಬೆಳೆಯುತ್ತೇವೆ. ಸುಮ್ಮನೆ ಯಾವುದೋ ಒಂದು ದೇಶದಲ್ಲಿ ಏನೋ ಮಾಡಿದ್ದಾರೆ ಎಂದರೆ ಅದರಂತೆ ಎಲ್ಲಾ ಕಡೆಯಲ್ಲಿಯೂ ಮಾಡುವುದಕ್ಕೆ ಬರುವುದಿಲ್ಲ. ವೈಜ್ಞಾನಿಕವಾಗಿ ಆಗುತ್ತದೆ ಎಂಬುದಲ್ಲ. ನಾವು ನಮ್ಮ ಕಡೆ ಒಂದು ಎಕರೆಗೆ 50 ಟನ್ ಕಬ್ಬನ್ನು ಬೆಳೆಯುತ್ತೇವೆ. ಕಬ್ಬಿನಲ್ಲಿ ಶೇಕಡ 12 ರಷ್ಟು ಸಕ್ಕರೆ ಪ್ರಮಾಣವಿರುತ್ತದೆ. ಅಷ್ಟಿದ್ದರೂ ಕೂಡ ನಮಗೆ ಅದು ವರ್ಕ್‌ಔಟ್ ಆಗುವುದಿಲ್ಲ. ಅದಕಾರಣ ಮಾನ್ಯ ಸದಸ್ಯರು ಹೇಳಿದ್ದರಲ್ಲಿ ಸಕ್ಕರೆಯ ಪ್ರಮಾಣವೆಷ್ಟು ಎಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು :– ಬೇಡ, ಬೇಡ ಅದರ details ಎಲ್ಲಾ ಈಗ ಬೇಡ. ಸರ್ಕಾರ ಈಗ ಏನು ಮಾಡಬೇಕು ಎಂಬ ಬಗ್ಗೆಯಷ್ಟೇ ಸೀಮಿತವಾಗಿ ಹೇಳಿ.

ಶ್ರೀ ಎಂ.ಟಿ.ಕೃಷ್ಣಪ್ಪ :– Practical ಆಗಿ ಆ technology ಯನ್ನು ಇಲ್ಲಿ implement ಮಾಡಿದರೆ ಒಳ್ಳೆಯದೆಂದು ಹೇಳಬಯಸುತ್ತೇನೆ.

ಅಧ್ಯಕ್ಷರು :– ಅವರು ಹೇಳಿದ್ದಾರೆ. ನೀವಿನ್ನು ಕುಳಿತುಕೊಳ್ಳಿ.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಮೇಲುಕೋಟೆ) :– ಮಾನ್ಯ ಅಧ್ಯಕ್ಷರೆ, ಇಷ್ಟೆಲ್ಲಾ ಚರ್ಚೆ ನಡೆಯುತ್ತಿದೆ. ಒಂದು ವಿಷಯವೇನೆಂದರೆ, ಇದಕ್ಕೆ permanent solution ಕಂಡುಹಿಡಿಯಬೇಕೇ ಹೊರತು, ಸರ್ಕಾರದವರಾದ ನಾವು ಐದು ನೂರು ಕೋಟಿ ಇಡುತ್ತೇವೆ, ಒಂದು ಸಾವಿರ ಕೋಟಿ ಇಡುತ್ತೇವೆಎಂದು ಹೇಳಿ, 19 ಜಿಲ್ಲೆಯ ತೆಂಗು ಬೆಳೆಗಾರರ ರಕ್ಷಣೆ ಮಾಡುವುದಕ್ಕೆ ದಯವಿಟ್ಟು ರೈತರು ಮತ್ತು ಅಧಿಕಾರಿಗಳನ್ನೊಳಗೊಂಡಂಥ ತೆಂಗು ಮಂಡಳಿಯನ್ನು ರಚನೆ ಮಾಡಿ. ಖಾಯಂ ಆಗಿ ಯಾವ ಕಾಲದಲ್ಲಿಯೂ 10 ರೂಪಾಯಿಗೂ ಬೆಲೆ ಕಡಿಮೆಯಾಗದಂಥ ರೀತಿಯಲ್ಲಿ ಆರ್ಥಿಕವಾಗಿ ಆಲೋಚನೆಯನ್ನು ಮಾಡಿ ಒಂದು ವ್ಯವಸ್ಥೆಯನ್ನು ಮಾಡಿದರೆ ಕನಿಷ್ಠ ಸುಧಾರಣೆ ಮಾಡಬಹುದೇ ಹೊರತು ನಾನು 2500/– ರೂ.ಗಳನ್ನು

ಕೊಡುತ್ತೇನೆ, 3,000/– ಕೊಡುತ್ತೇನೆ ಎಂದು ಹೇಳುವುದೆಲ್ಲ ಸುಳ್ಳು. ನಾವು ಹೇಳುವುದನ್ನು ಮಾಡಬಹುದು. ತೆಂಗು ಮಂಡಳಿ ಮಾಡುವುದಕ್ಕೆ ತಾವು ಪ್ರಯತ್ನ ಪಡಿ. 19 ಜಿಲ್ಲೆಯ ತೆಂಗು ಬೆಳೆಗಾರರಾದ ನಾವೆಲ್ಲರೂ ನಿಮ್ಮ ಜೊತೆಗೆ ಬರುತ್ತೇವೆ. ಆದುದರಿಂದ ಇದರ ಬಗ್ಗೆ permanent solution ಕಂಡುಹಿಡಿಯಬೇಕೇ ಹೊರತು ಸುಮ್ಮನೆ ತೇಲಿಸತಕ್ಕಂಥ ಉತ್ತರವನ್ನು ಸರ್ಕಾರ ಕೊಟ್ಟರೆ ಪ್ರಯೋಜನವಾಗುವುದಿಲ್ಲ. ಮಾನ್ಯ ತೋಟಗಾರಿಕಾ ಇಲಾಖಾ ಮಂತ್ರಿಯವರು ದಯವಿಟ್ಟು 100 ಕೋಟಿ, 300 ಕೋಟಿ, 500 ಕೋಟಿ ರೂ.ಗಳಲ್ಲಿ ಏನೂ ಆಗುವುದಿಲ್ಲ. ಸುಮಾರು 25 ರಿಂದ 30 ಸಾವಿರ ಕೋಟಿ ರೂ.ಗಳ ಕಾಯಿಗಳ ಬೆಲೆಯನ್ನು 500 ಕೋಟಿ, 300 ಕೋಟಿ ರೂ.ಗಳಲ್ಲಿ ಹೇಗೆ ಬಗೆಹರಿಸುತ್ತೀರಿ? ತಾವು ಆ ಜಾಗದಿಂದ ಬಂದಿದ್ದೀರಿ. ಯಾವ ಕಾಲದಲ್ಲಿಯೂ ತೆಂಗಿನ ಕಾಯಿ ಬೆಲೆ ಹತ್ತು ರೂಪಾಯಿಗಿಂತ ಕಡಿಮೆಯಾಗದೇ ಇರುವಂಥ ರೀತಿಯಲ್ಲಿ ಮಾಡಬೇಕು. ಮಾನ್ಯ ಸದಸ್ಯರೊಬ್ಬರು ಮಾತನಾಡುತ್ತಾ ಹೇಳಿದರು, ವೈಜ್ಞಾನಿಕ ಬೆಲೆ ಕೊಡುವುದಕ್ಕೆ ಆಗದಿದ್ದರೂ ಬೆಂಬಲ ಬೆಲೆಯೆಂದು ತಾವು ಹೇಳಿದಿರಿ.

ಅಧ್ಯಕ್ಷರು :– ಬೆಂಬಲ ಬೆಲೆಯಲ್ಲ. Remunerative price.

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ :– ಲಾಭದಾಯಕ ಬೆಲೆ, ಒಂದು ತೆಂಗಿನಕಾಯಿಗೆ 10 ರೂಪಾಯಿಗಿಂತ ಕಡಿಮೆಯಾಗದಂತೆ ನೋಡಿಕೊಳ್ಳಿ. ನಾವೆಲ್ಲರೂ ನಿಮಗೆ ಈ ವಿಚಾರದಲ್ಲಿ ಸಹಮತ ವ್ಯಕ್ತಪಡಿಸುತ್ತೇವೆ. ನಾವು ಸಂಪೂರ್ಣವಾಗಿ ನಿಮಗೆ ಸಹಕಾರವನ್ನು ಕೊಡುತ್ತೇವೆ.

ಶ್ರೀ ಶ್ಯಾಮನೂರು ಶಿವಶಂಕರಪ್ಪ (ತೋಟಗಾರಿಗೆ ಸಚಿವರು) :– ಮಾನ್ಯ ಅಧ್ಯಕ್ಷರೆ, ಈಗ ಲಿಖಿತ ಹೇಳಿಕೆಯನ್ನು ಓದುತ್ತಿದ್ದೇನೆ.

1. ತೆಂಗು ಕರ್ನಾಟಕ ರಾಜ್ಯದ ಪ್ರಮುಖ ವಾಣಿಜ್ಯ ಬೆಳೆಯಾಗಿದ್ದು, ತೆಂಗು ಉತ್ಪಾದನೆಯಲ್ಲಿ ದೇಶದಲ್ಲಿ ಮೂರನೇ ಸ್ಥಾನವನ್ನು ಪಡೆದಿದೆ. ಅಂದರೆ ಕರ್ನಾಟಕ ರಾಜ್ಯದಲ್ಲಿ ತೋಟಗಾರಿಕೆ ಬೆಳೆಗಳನ್ನು ಒಟ್ಟು 19.00ಲಕ್ಷ ವಿಸ್ತೀರ್ಣದಲ್ಲಿ ಬೆಳೆಯಲಾಗುತ್ತಿದ್ದು, ಇದರಲ್ಲಿ ಸುಮಾರು 4,91,337 ಹೆಕ್ಟೇರ್ (52850 ಲಕ್ಷ ಮಿಲಿಯನ್ ಕಾಯಿಗಳ ಉತ್ಪಾದನೆ) ಪ್ರದೇಶದಲ್ಲಿ ತೆಂಗು ಬೆಳೆಯನ್ನು ಬೆಳೆಯಲಾಗುತ್ತಿದೆ.

2. ತೋಟಗಾರಿಕೆ ಬೆಳೆಗಳ ವಿಸ್ತೀರ್ಣದಲ್ಲಿ ಶೇಕಡಾ 25.85ರಷ್ಟು ಈ ಬೆಳೆಯನ್ನು ಬೆಳೆಯಲಾಗುತ್ತಿದೆ.

3. ತೆಂಗು ಬೆಳೆಯನ್ನು ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಬೆಳೆಯುತ್ತಿದ್ದು, ಪ್ರಮುಖವಾಗಿ ತುಮಕೂರು (1,42,248 ಹೆಕ್ಟೇರ್), ಹಾಸನ (62,390 ಹೆಕ್ಟೇರ್), ಚಿತ್ರದುರ್ಗ (54,168 ಹೆಕ್ಟೇರ್), ಮಂಡ್ಯ (43,559 ಹೆಕ್ಟೇರ್), ಚಿಕ್ಕಮಗಳೂರು (32,480 ಹೆಕ್ಟೇರ್), ಮೈಸೂರು (25,170 ಹೆಕ್ಟೇರ್), ದಕ್ಷಿಣ ಕನ್ನಡ (16,023 ಹೆಕ್ಟೇರ್) ಹಾಗೂ ಉಡುಪಿ (17,299 ಹೆಕ್ಟೇರ್) ಜಿಲ್ಲೆಗಳಲ್ಲಿ ಹೆಚ್ಚಾಗಿ ಬೆಳೆಯಲಾಗಿದೆ. ತೆಂಗು ಬೆಳೆಯ ಉತ್ಪಾದಕತೆಯಲ್ಲಿ ತಮಿಳುನಾಡಿಗೆ (14,000 ಕಾಯಿಗಳು ಪ್ರತಿ ಹೆಕ್ಟೇರ್) ಹೋಲಿಸಿಕೊಂಡಲ್ಲಿ ಕರ್ನಾಟಕದಲ್ಲಿ ಸುಮಾರು 11,000 ಕಾಯಿಗಳು ಪ್ರತಿ ಹೆಕ್ಟೇರ್‌ಗೆ ಇಳುವರಿ ಇರುತ್ತದೆ.

4. ರಾಜ್ಯದಲ್ಲಿ ತೆಂಗು ಬೆಳೆಯನ್ನು ಶೇಕಡಾ 80 ರಷ್ಟು ಪ್ರದೇಶದಲ್ಲಿ ಮಳೆಯಾಶ್ರಿತ ಬೆಳೆಯಾಗಿ ಬೆಳೆಯಲಾಗುತ್ತಿದೆ.

5. ರಾಜ್ಯದಲ್ಲಿ ಕಳೆದ 2 ವರ್ಷಗಳಲ್ಲಿ ಮಳೆಯ ಅಭಾವದಿಂದಾಗಿ ತೆಂಗು ಬೆಳೆಯುವ ಹೆಚ್ಚಿನ ಭಾಗದಲ್ಲಿ ತೆಂಗಿನ ಇಳುವರಿ ಕಡಿಮೆಯಾಗಿರುವುದರ ಜೊತೆಗೆ ತೆಂಗಿನ ಬೆಳೆಯಲ್ಲಿ ಪ್ರಮುಖವಾಗಿ ಕಪ್ಪು ತಲೆ ಹುಳು, ನುಸಿ ಹಾಗೂ ಕಾಂಡ ಸೋರುವ ರೋಗ ಇತ್ಯಾದಿ, ಹೆಚ್ಚಿನ ಪ್ರಮಾಣದಲ್ಲಿ ಕಂಡು ಬಂದಿದೆ.

6. ಆ ದೃಷ್ಟಿಯಿಂದ ಇಲಾಖೆಯಿಂದ ಹೆಚ್ಚಿನ ಪ್ರಚಾರ ಕೈಗೊಂಡು ರಾಜ್ಯವಲಯ ಯೋಜನೆಯಿಂದ ಕೀಟ ಮತ್ತು ರೋಗ ನಿರ್ವಹಣೆಗೆ ಹೆಚ್ಚಿನ ಕ್ರಮ ಕೈಗೊಳ್ಳಲಾಗಿದೆ.

<u>ಬರಗಾಲದ ಹಿನ್ನೆಲೆಯಲ್ಲಿ ಇಲಾಖೆಯಿಂದ ಹಮ್ಮಿಕೊಂಡಿರುವ ಕ್ರಮಗಳು:–</u>

1. ರಾಜ್ಯದಲ್ಲಿ 2012–13ನೇ ಸಾಲಿನಲ್ಲಿ ಬರದಿಂದ ತೋಟಗಾರಿಕೆ ಬೆಳೆಗಳಿಗೆ ಆದ ನಷ್ಟದ ಬಗ್ಗೆ ಕೇಂದ್ರ ಸರ್ಕಾರಕ್ಕೆ ರೂ.321.00 ಕೋಟಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ. ಇದರಲ್ಲಿ

2. 1,94,830 ಹೆಕ್ಟೇರ್ ತೆಂಗು ಬೆಳೆ ಹಾನಿಯಾಗಿದ್ದು, ಸಿಆರ್‌ಎಫ್ ಅಡಿ ಬಹುವಾರ್ಷಿಕ ಬೆಳೆಗಳಿಗೆ ಒಂದು ಹೆಕ್ಟೇರ್‌ಗೆ ರೂ.8000/–ರಂತೆ ಒಟ್ಟು ರೂ.155.864 ಕೋಟಿಗಳ ಮೌಲ್ಯವಾಗಿರುತ್ತದೆ.

3. ಸರ್ಕಾರದ ಆದೇಶ ಸಂ.ಆರ್.ಡಿ./348/ಟಿ.ಎನ್.ಆರ್/2012, ಬೆಂಗಳೂರು, ದಿನಾಂಕ:22.2.2013 ರಂತೆ ರೈತರಿಗೆ ಬೆಳೆ ಹಾನಿಗೆ ಪರಿಕರಗಳ ಸಹಾಯಧನವನ್ನು ನೀಡಲು ಅನುದಾನ ಬಿಡುಗಡೆ ಮಾಡಲಾಗಿದ್ದು, ತೋಟಗಾರಿಕೆ ಬೆಳೆಗಳಿಗೆ ರೂ.100.00 ಕೋಟಿಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

4. ಸದರಿ ಅನುದಾನವನ್ನು 2012–13ನೇ ಸಾಲಿನ ಬರ ಪೀಡಿತ ಎಂದು ಘೋಷಿಸಿರುವಂತಹ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿರುತ್ತದೆ.

5. 2012–13ನೇ ಸಾಲಿಗೆ ಕೇಂದ್ರ ಸರ್ಕಾರವು ಕನಿಷ್ಠ ಬೆಂಬಲ ಬೆಲೆ ಯೋಜನೆಯಡಿ ಎಫ್.ಎ.ಕ್ಯೂ ಗುಣಮಟ್ಟದ ಕೊಬ್ಬರಿಗೆ ಪ್ರತಿ ಕ್ವಿಂಟಾಲ್‌ಗೆ ರೂ.5,350/–ಕನಿಷ್ಠ ಬೆಂಬಲ ಬೆಲೆ ಎಂದು ಘೋಷಿಸಿರುತ್ತಾರೆ. ಹಾಗೂ ರಾಜ್ಯ ಸರ್ಕಾರದಿಂದ ಮಾರುಕಟ್ಟೆ ದರವು ಕಡಿಮೆಯಾದ ಸಂದರ್ಭದಲ್ಲಿ ಹೆಚ್ಚುವರಿಯಾಗಿ ರೂ.700/– ಪ್ರತಿ ಕ್ವಿಂಟಾಲ್‌ಗೆ ಪ್ರೋತ್ಸಾಹಧನವನ್ನು 2012ನೇ ಸಾಲಿನಲ್ಲಿ ಖರೀದಿಸಿರುವ ಗರಿಷ್ಠ 7500 ಎಂ.ಟಿ. ಗಳಿಂದ 10000 ಎಂ.ಟಿ. ಗಳವರೆಗೆ ನಿಗದಿಪಡಿಸಲಾಗಿದೆ.

6. ತೆಂಗು ಬೆಳೆ ವಿಮೆ ಯೋಜನೆಯನ್ನು ತೆಂಗು ಬೆಳೆಯುವ ಜಿಲ್ಲೆಗಳಲ್ಲಿ ಅನುಷ್ಠಾನ ಗೊಳಿಸಲಾಗುತ್ತಿದೆ. 2012–13ನೇ ಸಾಲಿಗಾಗಿ ರೂ.15.00 ಲಕ್ಷ ಬೆಳೆ ವಿಮೆಗೆ ನಿಗದಿಪಡಿಸಿದ್ದು, ಸದರಿ ಯೋಜನೆಯನ್ನು 2013–14ನೇ ಸಾಲಿಗೂ ಮುಂದುವರೆಸಿದ್ದು, ಒಟ್ಟು ರೂ.25.05 ಲಕ್ಷಗಳ ಅನುದಾನವನ್ನು ನಿಗದಿಪಡಿಸಲಾಗಿದೆ.

7. ಪ್ರಸಕ್ತ ಮಾರುಕಟ್ಟೆಯಲ್ಲಿ ತೆಂಗಿನ ಬೆಲೆ ರೂ.7,200/– (ಪ್ರತಿ 1000 ಕಾಯಿಗಳಿಗೆ)ಗಳಾಗಿದ್ದು, ಒಣಕೊಬ್ಬರಿ (ಉಂಡೆ ಕೊಬ್ಬರಿ) ಬೆಲೆ ರೂ.4,400/– ರಿಂದ ರೂ.4,500/–ರವರೆಗೆ (ಪ್ರತಿ ಕ್ವಿಂಟಾಲ್) ಇರುತ್ತದೆ.

8. 2013ನೇ ಸಾಲಿನಲ್ಲಿ ಕೇಂದ್ರ ಸರ್ಕಾರವು ಬೆಂಬಲ ಬೆಲೆಯನ್ನು ದಿನಾಂಕ:18.02.2013 ರಂದು ಘೋಷಿಸಿರುತ್ತದೆ. ಕೇಂದ್ರ ಸರ್ಕಾರವು ನಾಫೆಡ್ ಸಂಸ್ಥೆಯನ್ನು ಕೇಂದ್ರ ಸರ್ಕಾರದ ಖರೀದಿ ಏಜೆನ್ಸಿಯಾಗಿ ಗುರ್ತಿಸಿರುತ್ತದೆ. ರಾಜ್ಯ ಸರ್ಕಾರವು ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯನ್ನು ರಾಜ್ಯ ಖರೀದಿ ಏಜೆನ್ಸಿಯಾಗಿ ನೇಮಿಸಿರುತ್ತದೆ.

9. ದಿನಾಂಕ: 18.02.2013ರಂದು ಕೇಂದ್ರ ಸರ್ಕಾರವು ಕ್ವಿಂಟಾಲ್‌ಗೆ ರೂ.5,500/–ಗಳೆಂದು ಘೋಷಿಸಿದ್ದರೂ ಸಹ ಖರೀದಿ ವಹಿವಾಟಿನಲ್ಲಿ ಶೇಕಡಾ 15ಕ್ಕಿಂತ ಹೆಚ್ಚಿಗೆ ನಷ್ಟ ಉಂಟಾದಲ್ಲಿ ಸದರಿ ನಷ್ಟವನ್ನು ನಾಫೆಡ್ ಸಂಸ್ಥೆಯೇ ಭರಿಸಬೇಕೆಂಬ ಕೇಂದ್ರ ಸರ್ಕಾರದ ನಿಬಂಧನೆ ಕಾರಣದಿಂದ ನಾಫೆಡ್ ಸಂಸ್ಥೆಯು, ಬೆಂಬಲ ಬೆಲೆ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಿರುವುದಿಲ್ಲ.

10. ಕೊಬ್ಬರಿಯ ಬೆಲೆ ಮಾರುಕಟ್ಟೆಯಲ್ಲಿ ಘೋಷಿತ ಬೆಂಬಲ ಬೆಲೆಗಿಂತ ಕಡಿಮೆ ದರದಲ್ಲಿ ವಹಿವಾಟು ನಡೆಯುತ್ತಿರುವ ಅಂಶವನ್ನು ಗಮನಿಸಿ, ಕರ್ನಾಟಕ ಸರ್ಕಾರದಿಂದ ನಾಫೆಡ್ ಸಂಸ್ಥೆಗೆ ಪತ್ರ ಬರೆದು ಈ ತಕ್ಷಣದಿಂದ ಖರೀದಿ ಪ್ರಕ್ರಯೆ ಪ್ರಾರಂಭಿಸಲು ಸೂಚಿಸಲಾಗಿದೆ.

11. ಮುಂದುವರೆದು, ದಿನಾಂಕ:17.04.2013ರಂದು ಸಹಕಾರ ಇಲಾಖೆಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಪ್ರಧಾನ ಕಾರ್ಯದರ್ಶಿಗಳು, ತೋಟಗಾರಿಕೆ ಇಲಾಖೆ, ನಾಫೆಡ್ ಸಂಸ್ಥೆ, ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿ, ತೆಂಗು ಅಭಿವೃದ್ಧಿ ಮಂಡಳಿ ಇವರುಗಳು ಸಭೆ ನಡೆಸಿ, ನಾಫೆಡ್ ಸಂಸ್ಥೆಯು ಈ ಕೂಡಲೇ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ಕೋರಲಾಗಿದೆ. ಜೊತೆಗೆ ಕರ್ನಾಟಕ ಸರ್ಕಾರದ ಸಹಕಾರ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳು ಕೇಂದ್ರ ಸರ್ಕಾರಕ್ಕೆ ಪತ್ರ ಬರೆದು ಬೆಂಬಲ ಬೆಲೆ ಖರೀದಿ ಪ್ರಕ್ರಿಯೆಯನ್ನು ಪ್ರಾರಂಭಿಸಲು ನಾಫೆಡ್ ಸಂಸ್ಥೆಗೆ ಸೂಚನೆ ನೀಡಲು ಕೋರಿರುತ್ತಾರೆ.

12. ನಾಫೆಡ್ ಸಂಸ್ಥೆ ಮತ್ತು ಕೇಂದ್ರ ಸರ್ಕಾರದ ನಡುವೆ ಸದರಿ ವಿಷಯದಲ್ಲಿ ಪತ್ರ ವ್ಯವಹಾರ ಮತ್ತು ಸಮಾಲೋಚನೆ ನಂತರ ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳಿಗೆ ನಾಫೆಡ್ ಸಂಸ್ಥೆಯು ದಿನಾಂಕ:17.05.2013ರಂದು ಖರೀದಿ ಕೇಂದ್ರಗಳನ್ನು ತೆರೆಯಲು ಮತ್ತು ಪ್ರತಿ ಕ್ವಿಂಟಾಲ್‌ಗೆ ರೂ.5500/–ರಂತೆ ಬೆಂಬಲ ಬೆಲೆಯಲ್ಲಿ ಖರೀದಿ ಪ್ರಾರಂಭಿಸಲು ಅನುಮತಿ ನೀಡಿರುತ್ತಾರೆ.

13. ಕರ್ನಾಟಕ ರಾಜ್ಯ ಸಹಕಾರ ಮಾರಾಟ ಮಹಾಮಂಡಳಿಯು ಖರೀದಿ ಕೇಂದ್ರಗಳನ್ನು ಪ್ರಾರಂಭಿಸಿ, ದಿನಾಂಕ:12.06.2013ರಿಂದ ಖರೀದಿ ಕೇಂದ್ರಗಳ ಮುಖಾಂತರ ಬೆಂಬಲ ಬೆಲೆಯಲ್ಲಿ ರೈತರಿಂದ ಉಂಡೆ ಕೊಬ್ಬರಿಯನ್ನು ಖರೀದಿಸಲು ಕ್ರಮ ಜರುಗಿಸಲಾಗುವುದು.

14. ಈ ದಿನ ಸದನದಲ್ಲಿ ಮಾನ್ಯ ಸದಸ್ಯರುಗಳು ಚರ್ಚಿಸಿದ ವಿಷಯಗಳನ್ನು ಮನವರಿಕೆ ಮಾಡಿಕೊಳ್ಳಲಾಗಿದೆ. ಈ ವರ್ಷ ಹೆಚ್ಚುವರಿ ಪ್ರೋತ್ಸಾಹಧನವನ್ನು ನೀಡುವ ಬಗ್ಗೆ ಸಚಿವ ಸಂಪುಟ ಉಪ ಸಮಿತಿ ಮುಂದೆ ಮಂಡಿಸಿ ಶೀಘ್ರದಲ್ಲಿ ಸೂಕ್ತ ತೀರ್ಮಾನ ತೆಗೆದುಕೊಳ್ಳಲಾಗುವುದು ಎಂಬ ವಿಷಯವನ್ನು ಸದನ ಗಮನಕ್ಕೆ ತರಬಯಸುತ್ತೇನೆ.

ಮಾನ್ಯ ಅಧ್ಯಕ್ಷರೆ, ಇದುವರೆಗೂ ನಮ್ಮ ಗೌರವಾನ್ವಿತ ಸದಸ್ಯರುಗಳು ತೆಂಗು ನಾಶವಾಗಿರುವ ಬಗ್ಗೆ ಅನೇಕ ಸಲಹೆಗಳನ್ನು ಕೊಟ್ಟಿದ್ದಾರೆ. ಅದೆಲ್ಲವನ್ನೂ ಕೂಡ ಸರ್ಕಾರ ಗಮನದಲ್ಲಿಟ್ಟುಕೊಂಡು ಆದಷ್ಟು ಹೆಚ್ಚಿನ ರೀತಿಯಲ್ಲಿ ರೈತರಿಗೆ ಸಹಾಯ ಮಾಡುತ್ತೇವೆ. ರೈತರ ಬಗ್ಗೆ ಶಿವಲಿಂಗೇಗೌಡರು ವಿಷ ಕುಡಿಯುವುದಕ್ಕೆ ಬಿಡಬೇಡಿ ಎಂದು ಹೇಳಿದರು. ನಮ್ಮ ಸರ್ಕಾರ ಯಾವ ರೈತರಿಗೂ ಕೂಡ ವಿಷ ಕುಡಿಯುವುದಕ್ಕೆ ಬಿಡುವುದಿಲ್ಲ, ಅವರ ಸಹಾಯಕ್ಕೆ ನಮ್ಮ ಸರ್ಕಾರ ಯಾವಾಗಲೂ ಇರುತ್ತದೆ ಎನ್ನತಕ್ಕಂಥ ಮಾತನ್ನು ಮೊಟ್ಟಮೊದಲನೆಯದಾಗಿ ನಮ್ಮ ಸದಸ್ಯರಿಗೆ ನಾನು ತಿಳಿಸಬಯಸುತ್ತೇನೆ. ಈಗಾಗಲೇ ನಾವು ಕೊಟ್ಟಿರತಕ್ಕಂಥ ಲಿಖಿತವಾದ ಹೇಳಿಕೆಯಲ್ಲಿ ಎಷ್ಟು ವಿಸ್ತೀರ್ಣದಲ್ಲಿ ನಾವು ತೆಂಗನ್ನು ಬೆಳೆಯುತ್ತಿದ್ದೇವೆ ಎನ್ನುವುದನ್ನೂ ಕೂಡ ಹೇಳಲಾಗಿದೆ. ಮಾನ್ಯ ಸದಸ್ಯರುಗಳು ಕೂಡ ಹೇಳಿದ್ದಾರೆ. ಮಳೆಯಿಂದ ಬೆಳೆಯತಕ್ಕಂಥ ಈ ತೆಂಗಿನ ಮರಗಳನ್ನು ಶೇಕಡ 25 ಭಾಗ ನಮ್ಮ ತೋಟಗಾರಿಕೆಯಲ್ಲಿ ಬೆಳೆಯಲಾಗುತ್ತಿದೆಯೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. ಹಿಂದಿನ ಕಾಲದಲ್ಲಿ ಹತ್ತು ವರ್ಷ, ಹದಿನೈದು ವರ್ಷ, 20 ವರ್ಷಗಳ ಕಾಲ ತೆಂಗಿನ ಫಸಲು ಬರುವುದಕ್ಕೆ ಆಗುತ್ತಿತ್ತು. ಈಗ ಹೈಬ್ರೀಡ್ ಬಂದಿರುವುದರಿಂದ 7 ವರ್ಷ, 6 ವರ್ಷ, 8 ವರ್ಷದೊಳಗೆ ತೆಂಗಿನ ಫಸಲು ಬರತಕ್ಕಂಥ ತಳಿಗಳು ಕೂಡ ಇವೆಯೆಂದು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಈಗ ತೆಂಗಿನ ಮರಗಳಿಗೆ ನುಸಿ ರೋಗ ಬಂದಿರುವುದರಿಂದ ಇದನ್ನು ನಿಯಂತ್ರಿಸಲು ಸರ್ಕಾರದ ವತಿಯಿಂದ ತಕ್ಷಣ ನಾವು ಕ್ರಮವನ್ನು ಕೈಗೊಂಡು ಔಷಧಗಳನ್ನು ಹೊಡೆಸತಕ್ಕಂಥ ಕಾರ್ಯಕ್ರಮವನ್ನು ಮಾಡಿ 50 ಪರ್ಸೆಂಟ್ ಸಬ್ಸಿಡಿಯನ್ನು ಕೊಡತಕ್ಕಂಥ ಕೆಲಸವನ್ನು ಕೂಡ ಮಾಡುತ್ತಿದ್ದೇವೆಂದು ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ಒಂದು ನೂರು ಕೋಟಿ ರೂ.ಗಳನ್ನು ಜಿಲ್ಲಾಧಿಕಾರಿಗಳ ಖಾತೆಗೆ ಕೊಟ್ಟು ಅಲ್ಲಿ ರೈತರಿಗೆ ತೆಂಗು ಬೆಳೆಯಲ್ಲಿ

ಆಗಿರತಕ್ಕಂಥ ಹಾನಿಗೆ ಹಣ ವಿತರಣೆ ಮಾಡುವುದಕ್ಕೆ ಈಗಾಗಲೇ ನಾವು ಕ್ರಮ ಕೈಗೊಂಡಿದ್ದೇವೆ. ಎಲ್ಲಿ ತೆಂಗು ರೋಗಪೀಡಿತವಾಗಿರುತ್ತದೆಯೋ ಅಲ್ಲಿ ನಾಶವಾಗಿರತಕ್ಕಂತಹ ತೆಂಗಿನ ಗಿಡಗಳಿಗೆ ಪರಿಹಾರವನ್ನು ಜಿಲ್ಲಾಧಿಕಾರಿಗಳು ಕೊಡುತ್ತಿದ್ದಾರೆಂದು ತಮ್ಮ ಗಮನಕ್ಕೆ ತರಬಯಸುತ್ತೇನೆ. 321 ಕೋಟಿ ರೂ.ಗಳಿಗೆ ನಾವು ಕೇಂದ್ರ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ಈಗಾಗಲೇ 100 ಕೋಟಿ ರೂ.ಗಳನ್ನು ಜಿಲ್ಲಾಧಿಕಾರಿಗಳಿಗೆ ಕೊಟ್ಟಿರುವುದನ್ನು ಈಗಾಗಲೇ ಹೇಳಿದ್ದೇವೆ. ನಿಮಗೆ ತಿಳಿದಿರುವಂತೆ ಈ ಹಿಂದೆ ಕೇಂದ್ರ ಸರ್ಕಾರ 5500 ರೂ.ಗಳಂತೆ ಕೊಬ್ಬರಿ ಖರೀದಿ ಬೆಲೆಯನ್ನು ನಿಗದಿ ಮಾಡಿತ್ತು. ಆಗಿನ ಸರ್ಕಾರ 700 ರೂ.ಗಳ ಬೆಂಬಲ ಬೆಲೆಯನ್ನು ಕೊಟ್ಟು 6,200/– ರೂ.ಗಳಂತೆ ಕೊಬ್ಬರಿಯನ್ನು ಖರೀದಿ ಮಾಡತಕ್ಕಂಥ ವ್ಯವಸ್ಥೆಯನ್ನು ಮೂರು ತಿಂಗಳ ತನಕ ಡಿಸೆಂಬರ್‌ವರೆಗೂ ಮಾಡಿದ್ದರು. ತದನಂತರದಲ್ಲಿ ಖರೀದಿ ಮಾಡುತ್ತಿಲ್ಲ. ಆದರೆ ಈಗ ಮಾರ್ಕೆಟ್‌ನಲ್ಲಿ ರೂ.4400/– ಗಳಿಂದ ರೂ.4500/– ಗಳವರೆಗೆ ಬೆಲೆ ಇರುವುದರಿಂದ ನೀವು ಸೇರಿದಂತೆ ಸರ್ಕಾರದವರಾದ ನಾವು ಒಪ್ಪಿಕೊಳ್ಳುತ್ತೇವೆ, ಈಗ ಬೆಂಬಲ ಬೆಲೆಯನ್ನು ಏನು ಕೊಡಬೇಕಾಗಿದೆಯೋ ಆ ಬೆಂಬಲ ಬೆಲೆಯನ್ನು ನಿಗದಿ ಮಾಡಬೇಕಾದರೆ ನಮ್ಮ ಸರ್ಕಾರದಲ್ಲಿ ಒಂದು ಉಪ ಕಮಿಟಿ ಇದೆ. ಆ ಉಪ ಸಮಿತಿಯಲ್ಲಿ ನಾವು ತೀರ್ಮಾನ ಮಾಡಿ ಆದಷ್ಟು ಹೆಚ್ಚು ಸಹಾಯವನ್ನು ಕೊಡತಕ್ಕಂಥ ವ್ಯವಸ್ಥೆಯನ್ನು ನಮ್ಮ ಸರ್ಕಾರ ಮಾಡುತ್ತೇದೆಂದು ಈ ಸಂದರ್ಭದಲ್ಲಿ ಸದನಕ್ಕೆ ಹೇಳುತ್ತಿದ್ದೇನೆ. ಈಗಾಗಲೇ ತೆಂಗು ಬೆಳೆಗೆ insurance ಕೂಡ ಮಾಡುವುದಕ್ಕೆ ವ್ಯವಸ್ಥೆಯನ್ನು ಮಾಡಿದ್ದೇವೆಂದು ಹೇಳಬಯಸುತ್ತೇನೆ. ಉಪ ಸಮಿತಿಯಲ್ಲಿ ಆದಷ್ಟು ಬೇಗ ಬೆಲೆ ಬಗ್ಗೆ ತೀರ್ಮಾನ ಮಾಡುತ್ತೇವೆ. ಕೆಲವರು ಒಂದು ಸಾವಿರ ರೂಪಾಯಿ ಎಂದು ಹೇಳಿದ್ದೀರಿ, ಇನ್ನೂ ಕೆಲವರು ಎರಡೂವರೆ ಸಾವಿರ ರೂ.ಗಳೆಂದು ಹೇಳಿದ್ದೀರಿ, ಆದಷ್ಟು ಹೆಚ್ಚು ಬೆಲೆ ಕೊಟ್ಟು ರೈತರಿಗೆ ಸಹಾಯ ಮಾಡತಕ್ಕಂಥ ಕಾರ್ಯಕ್ರಮವನ್ನು ನಾವು ಮಾಡುತ್ತೇವೆ ಎನ್ನುವುದನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಈಗಾಗಲೇ ನಾಫೆಡ್‌ನವರಿಗೆ ಖರೀದಿ ಮಾಡುವುದಕ್ಕೆ ಒಪ್ಪಿಕೊಂಡು ನಾಳೆ 11ನೇ ತಾರೀಖಿನಿಂದ ಅವರು ಖರೀದಿಯನ್ನು ಮಾಡುತ್ತಿದ್ದಾರೆ. ನಾಫೆಡ್‌ನವರಿಗೆ ಲಾಸ್ ಆಗಿದೆ ಹಿಂದೆ ಖರೀದಿ ಮಾಡುತ್ತಿರಲಿಲ್ಲ ಎಂದು ಹೇಳಿದ್ದು, ಮುಗಿದುಹೋದ ಕಥೆ ಈಗ ಅದರ ಬಗ್ಗೆ ಯೋಚನೆ ಮಾಡುವುದು ಬೇಡ.

ಈಗ ನಾಫೆಡ್‌ನವರು ಖರೀದಿಯನ್ನು ಚಾಲೂ ಮಾಡುತ್ತಾರೆ ಎಂಬುದನ್ನು ಈ ಸಂದರ್ಭದಲ್ಲಿ ನಾನು ಹೇಳಬಯಸುತ್ತೇನೆ. ಈ ಒಂದು ಖರೀದಿ ಕೇಂದ್ರಗಳನ್ನು ಎಲ್ಲೆಲ್ಲಿ ಹೆಚ್ಚು ತೆಂಗು ಬರುತ್ತದೋ ಆ ಭಾಗದಲ್ಲಿ ಮಾಡಿ ನಾವು ಆದಷ್ಟು ಶೀಘ್ರದಲ್ಲಿ ಅಂದರೆ 11 ಅಥವಾ 17ನೇ ತಾರೀಖಿನಿಂದ ಖರೀದಿಯನ್ನು ಮಾಡುತ್ತೇವೆ ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ತಿಳಿಸಬಯಸುತ್ತೇನೆ. ಇನ್ನು ಈಗಾಗಲೇ ತಾವು ಹೇಳಿದಂತೆ ತೆಂಗಿನ ಬೆಳೆ 1,94,830 ಎಕರೆಯಲ್ಲಿ ಲಾಸ್ ಆಗಿಲ್ಲ, ಬರಗಾಲದಿಂದ ಹಾನಿಯಾಗಿದೆಯಷ್ಟೆ. ಇದರಿಂದಾಗಿ ಇಳುವರಿ ಕುಂಠಿತವಾಗಿದೆ. ಈ ಇಳುವರಿ ಕುಂಠಿತವಾಗಿರುವುದನ್ನು ನಾವು ಔಷಧಗಳ ಮೂಲಕ ಸರಿಪಡಿಸಿ ಹೆಚ್ಚು yield ಬರತಕ್ಕಂಥ ರೀತಿಯಲ್ಲಿ ಗೊಬ್ಬರವನ್ನು ತೆಂಗಿನ ಗಿಡಗಳಿಗೆ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿ ಮತ್ತು ಹನಿ ನೀರನ್ನು ಕೊಡಬೇಕು ಎನ್ನತಕ್ಕಂಥ ಒಂದು ವ್ಯವಸ್ಥೆ ಬಗ್ಗೆ ಹೇಳುತ್ತಿದ್ದೀರೋ ಅದರ ಬಗ್ಗೆ ಕೂಡ ನಮ್ಮ ಸರ್ಕಾರ ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುತ್ತೇವೆನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡಬಯಸುತ್ತೇನೆ. ಇನ್ನು ಸಕ್ಕರೆ ತಯಾರು ಮಾಡುವುದರ ಬಗ್ಗೆ ಸಲಹೆಯನ್ನು ಮಾನ್ಯ ಸದಸ್ಯರುಗಳು ಕೊಟ್ಟಿದ್ದಾರೆ. ಸಕ್ಕರೆ yield ಎಷ್ಟು ಬರುತ್ತದೆ ಎನ್ನುವುದನ್ನು ನಾವು ಮೊದಲು ನೋಡಬೇಕಾಗುತ್ತದೆ. ಕಬ್ಬಿನ ಬಗ್ಗೆ ಈ ಭಾಗದಲ್ಲಿ ನೋಡುವುದಾದರೆ 10% ನಿಂದ 10.5% ವರೆಗೂ yield ಬರುತ್ತದೆ. ಆದರೆ ಬೆಳಗಾಂ ಮತ್ತು ಬಾಗಲಕೋಟೆ ಭಾಗದಲ್ಲಿ 12.5 ರಿಂದ 13 ಪರ್ಸೆಂಟ್ yield ಬರುತ್ತದೆ. ಆದುದರಿಂದ ಎಷ್ಟು yield ಬರುತ್ತದೆ ಎನ್ನುವುದು ಬಹಳ ಮುಖ್ಯ. ಆ ಕಾರಣದಿಂದ ನಾವು ಅದನ್ನೂ ಕೂಡ ಪರಿಶೀಲನೆ ಮಾಡಿ ಬೇಕಾದರೆ ಮಾನ್ಯ ಕೃಷ್ಣಪ್ಪನವರು ಏನು suggest ಮಾಡಿದ್ದಾರೆ, ಆ ಪ್ರಕಾರ ಕೆಲವು ದೇಶಗಳಿಗೆ ನಮ್ಮ ಅಧಿಕಾರಿಗಳನ್ನು ಕಳುಹಿಸಿ, ಅಲ್ಲಿ ವ್ಯವಸ್ಥೆ ಏನಿದೆ ಎಂದು ನೋಡಿಕೊಂಡು ಬಂದು, ಆ ವ್ಯವಸ್ಥೆ ಸರಿ ಹೋಗುವುದಾದರೆ ರೈತರಿಗೆ ಲಾಭದಾಯಕವಾಗಿದ್ದರೆ ಪ್ರಾರಂಭ ಮಾಡಿಸುತ್ತೇನೆಂದು ಹೇಳುತ್ತಾ, ಆದಷ್ಟು ಜಾಗ್ರತೆ ಪ್ರೋತ್ಸಾಹ ಧನವನ್ನು ಕೊಡುವುದರ ವಿಚಾರದಲ್ಲಿ ಸಚಿವ ಸಂಪುಟದ ಉಪಸಮಿತಿ ಮುಂದೆ ವಿಷಯ ಮಂಡಿಸಿ, ಶೀಘ್ರದಲ್ಲಿ ಸೂಕ್ತ ತೀರ್ಮಾನವನ್ನು ಕೈಗೊಳ್ಳುತ್ತೇವೆನ್ನುವ ಭರವಸೆಯನ್ನು ನೀಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಒಂದು ವಿಚಾರದಲ್ಲಿ ಚರ್ಚೆ ಆಗಿದ್ದನ್ನು ಮಾನ್ಯ ಸಚಿವರು ಬಹುಶಃ ಮರೆತರು ಎಂದು ಕಾಣುತ್ತದೆ. ಸುಳಿ ಹೋಗಿ ಕೆಳಗಿನಿಂದ ಬುಡಸಮೇತ ಮರವನ್ನು ಕಡಿದು ಹಾಕಬೇಕು, ಆ ಮರಗಳಿಗೆ ಏನು ಪರಿಹಾರವೆನ್ನುವುದು ನಮ್ಮ ಪ್ರಶ್ನೆ. ಮರಗಳನ್ನು 15 ವರ್ಷದಿಂದ ಸಾಕಿ ಸಲುಹಿ, ಇವತ್ತು ಆ ಮರಗಳ ಆಧಾರ ಅನುಸರಿಸಿ ಆ ಒಂದು ಕುಟುಂಬದ ಜೀವನ ಏನು ನಡೆಯುತ್ತಿತ್ತು? ಆ ಕುಟುಂಬದ ಜೀವನ ಕಷ್ಟಕರವಾಗಿದೆ, ಅವರಿಗೆ ಏನು ಪರಿಹಾರ ಎಂದು ಪ್ರಶ್ನೆ ಮಾಡಿರುವುದಕ್ಕೆ ನೀವು ಉತ್ತರ ಹೇಳಲಿಲ್ಲ. ಎರಡನೆಯದಾಗಿ ಕೇಂದ್ರ ಸರ್ಕಾರದ ನಾಫೆಡ್ ಸಂಸ್ಥೆ, ನಾವು 15% ನಷ್ಟ ಹೊಂದಿದ್ದೇವೆ, ಹಾಗಾಗಿ ನಾವು ಇಲ್ಲಿ ಖರೀದಿ ಕೇಂದ್ರವನ್ನು ತೆರೆಯುವುದಕ್ಕೆ ಆಗುವುದಿಲ್ಲ, ಆ ನಷ್ಟವನ್ನು ರಾಜ್ಯ ಸರ್ಕಾರ ತುಂಬಿಕೊಡಬೇಕೆಂದು ಅವರು ಹೇಳಿದ್ದಾರೆ.

ಅಧ್ಯಕ್ಷರು : ಖರೀದಿ ಕೇಂದ್ರವನ್ನು ಪ್ರಾರಂಭ ಮಾಡುತ್ತೇವೆಂದು ಹೇಳಿದ್ದಾರೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅವರು ಏನು ಹೇಳಿದ್ದಾರೆ, ಅದು ಒಳ್ಳೆಯದಲ್ಲ, ಅವರು ಅದನ್ನೂ ಹೇಳಬಾರದು. ರೈತರು ಎಂದರೆ ಈ ರೀತಿ ಭಾವನೆ ಹೊಂದಿರುವುದು ಯಾವುದೇ ಸರ್ಕಾರಕ್ಕೆ ಒಳ್ಳೆಯದಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ಕಳೆದ ಸಾರಿ ಸಹಾಯಧನ 650 ರೂಪಾಯಿ ಕೊಟ್ಟಿತ್ತು. ಈ ಸಾರಿ ನಿಮ್ಮ ಸರ್ಕಾರದ ಬದ್ಧತೆ ಏನು? ನೀವು ಎಷ್ಟು ಕೊಡುತ್ತೀರೆಂದು ಈ ಸದನದ ಮುಖಾಂತರ ರಾಜ್ಯದ ಜನತೆಗೆ ತಿಳಿಸಿ ಎಂದು ಇಷ್ಟೆ ಅಲ್ಲ, ನಿಮ್ಮ ಮುಂದೆ ಕೈಜೋಡಿಸಿ ನಮಸ್ಕಾರ ಮಾಡಿ ಕೇಳಿದರೂ ಕೂಡ ಇನ್ನೂ ನೀವು ವಿಚಾರ ಮಾಡುತ್ತೇವೆ, ನಾವು ನೋಡುತ್ತೇವೆ ಎಂದು ಹೇಳುತ್ತಿದ್ದೀರಿ. ಈ ವಿಷಯವನ್ನು ತೆಗೆದುಕೊಂಡು ಬಂದು ಎರಡು ದಿವಸ ಆಯಿತು. ಸರ್ಕಾರಕ್ಕೆ ಜವಾಬ್ದಾರಿ ಕೂಡ ಇಲ್ಲ. ನಾವು ನಿಯಮ 69ರ ಅಡಿಯಲ್ಲಿ ಚರ್ಚೆಗೆ ತೆಗೆದುಕೊಂಡು ಬಂದು ಎಷ್ಟು ದಿವಸವಾಯಿತು? ಇದರ ಬಗ್ಗೆ ಸರ್ಕಾರ ಚಿಂತನೆ ಮಾಡಬಾರದೇ? ಏನಾದರೂ ಕೊಡಬೇಕೆನ್ನುವ ಚಿಂತನೆ ಸರ್ಕಾರಕ್ಕೆ ಬೇಕಲ್ಲವೇ?

ಅಧ್ಯಕ್ಷರು : ಆಯಿತು, ನೀವು ಹೇಳಿ.

ಶ್ರೀ ಶಾಮನೂರು ಶಿವಶಂಕರಪ್ಪ : ಒಂದು ಸಾವಿರ ರೂಪಾಯಿ ಕೊಡಬೇಕೆಂದು ನಮ್ಮ ಸರ್ಕಾರ ಚಿಂತನೆ ಮಾಡುತ್ತಿದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಎಲ್ಲಿ ಚಿಂತನೆ ಆಗಿದೆ?

ಶ್ರೀ ಶಾಮನೂರು ಶಿವಶಂಕರಪ್ಪ : ಸಬ್ ಕಮಿಟಿ ಮುಂದೆ ಇಡಬೇಕೆಂದು ಇದೆ, ಸರ್ಕಾರ ರಚನೆಯಾಗಿ ಇನ್ನೂ 15 ದಿವಸವಾಗಿಲ್ಲ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ರೈತರಿಗೆ ಪರಿಹಾರ ಕೊಡಿ.

ಅಧ್ಯಕ್ಷರು: ಅವರಿಗೆ ಹೇಳುವುದಕ್ಕೆ ಅವಕಾಶ ಕೊಡಿ.

ಶ್ರೀ ಶಾಮನೂರು ಶಿವಶಂಕರಪ್ಪ : ಇದರ ಬಗ್ಗೆ ಸರ್ಕಾರ ಪರಿಶೀಲನೆ ಮಾಡುತ್ತದೆಂದು ತಮಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಸಿ.ಎನ್.ಬಾಲಕೃಷ್ಣ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಬೆಳೆ ನಷ್ಟಕ್ಕೆ 100 ಕೋಟಿ ರೂಪಾಯಿಯನ್ನು ಜಿಲ್ಲಾಧಿಕಾರಿಗಳಿಗೆ ಈ ಸರ್ಕಾರ release ಮಾಡಿದೆ ಎಂದು ಸದನದಲ್ಲಿ ತಿಳಿಸಿದರು. ಅಂದರೆ Revenue Departmentನ assessment ಪ್ರಕಾರ ಹೋಗಿರುವಂತಹ ಒಂದು ತೆಂಗಿನ ಮರಕ್ಕೆ 75 ರಿಂದ 100 ರೂಪಾಯಿ ಕೊಡಬೇಕೆನ್ನುವ ಲೆಕ್ಕಾಚಾರದಲ್ಲಿ ಇದೆ.

ಶ್ರೀ ಕೆ.ಎಂ.ಶಿವಲಿಂಗೇಗೌಡ : ಅದರಿಂದ ಒಂದು ಮರದ ಬೇರು ಕೀಳಿಸುವುದಕ್ಕೆ ಆಗುವುದಿಲ್ಲ. ಒಂದು ಮರದ ಬೇರು ಕೀಳುವುದಕ್ಕೆ 300 ರಿಂದ 400 ರೂಪಾಯಿ ತೆಗೆದುಕೊಳ್ಳುತ್ತಾರೆ. ಅದೂ ಸಾಕಾಗುವುದಿಲ್ಲ.

ಅಧ್ಯಕ್ಷರು : ನೀವು ಈಗ ಹೇಳುತ್ತೀರಿ, ಭಾಷಣ ಮಾಡಬೇಕಾದರೆ ಈ ವಿಷಯ ಹೇಳಿದಿರಾ?

ಶ್ರೀ ಸಿ.ಎನ್.ಬಾಲಕೃಷ್ಣ : ಹೇಳಿದ್ದೇನಲ್ಲ?

ಅಧ್ಯಕ್ಷರು : ಎಲ್ಲಿ ಹೇಳಿದಿರಿ? ಹೇಳಲೇ ಇಲ್ಲ.

ಶ್ರೀ ಸಿ.ಎನ್.ಬಾಲಕೃಷ್ಣ : 10,000 ರೂಪಾಯಿ ಪರಿಹಾರ ಕೊಡಿ ಎಂದು ಹೇಳಿದ್ದೇನೆ.

ಅಧ್ಯಕ್ಷರು : ಅದು ಹೇಳಿದಿರಿ. ಆಯಿತು ಸಾಕು.

ಶ್ರೀ ಟಿ.ಬಿ.ಜಯಚಂದ್ರ : ಮಾನ್ಯ ಅಧ್ಯಕ್ಷರೆ, ನಿಯಮ 69ರ ಅಡಿಯಲ್ಲಿ ಮಾನ್ಯ ಸದಸ್ಯರುಗಳು ತೆಂಗಿನ ಬೆಳೆಗಾರರ ಬಗ್ಗೆ ಸಾಕಷ್ಟು ಬೆಳಕನ್ನು ಚೆಲ್ಲಿದ್ದಾರೆ. ನಾನು ನಿಜವಾಗಿಯೂ ಕೂಡ ನಿಮ್ಮೆಲ್ಲರ ಸಲಹೆಯನ್ನು ಸ್ವಾಗತಿಸುತ್ತೇನೆ. ಆದರೆ

ಸರ್ಕಾರ ನಡೆಯಬೇಕಾದರೆ ಒಂದು ತಾಂತ್ರಿಕವಾದ ವಿಚಾರವೇನೆಂದರೆ, ಮೊದಲು ಕ್ಯಾಬಿನೆಟ್ ಸಬ್ ಕಮಿಟಿ ಆಗಬೇಕು, ಆ ಸಬ್ ಕಮಿಟಿ ಮುಂದೆ ಇವೆಲ್ಲ ವಿಷಯಗಳು ಚರ್ಚೆಯಾಗಿ ಪ್ರಕ್ರಿಯೆಗಳು ಪ್ರಾರಂಭವಾಗಬೇಕಾಗುತ್ತದೆ. ಆದರೆ ಬೆಳೆ ಹಾಳಾಗಿರುವುದರ ವಿಚಾರದಲ್ಲಿ ಹೇಳುವುದಾದರೆ ನಾವು CRF guidelines ಪ್ರಕಾರ ನೂರು ಕೋಟಿ ರೂಪಾಯಿಯನ್ನು horticulture crops ಸೇರಿದಂತೆ ಕೂಡ ಇವತ್ತು release ಮಾಡಿದ್ದೇವೆ. ನಾನು ರೈತನಾಗಿದ್ದಂತಹ ಸಂದರ್ಭದಲ್ಲಿ ಇದು ನನಗೂ ಕೂಡ ಅರಿವಾಗಿದೆ, ಅದು ಬಹಳಷ್ಟು ಜನಕ್ಕೆ ತಲುಪಿಲ್ಲ ಮತ್ತು ಗೊತ್ತಿಲ್ಲ. ಅದಕ್ಕೆ ನಾವು ವ್ಯಾಪಕವಾಗಿ ಪ್ರಚಾರ ಮಾಡುವಂಥದ್ದರ ಬಗ್ಗೆ ಮತ್ತು ರೈತರಿಗೆ ನೇರವಾಗಿ ತಲುಪಿಸುವುದರ ಬಗ್ಗೆ ಕೂಡ ಚಿಂತನೆ ಮಾಡುತ್ತೇವೆ. ಆದರೆ ನಾನು ಇಷ್ಟು ಮಾತ್ರ ಆಶ್ವಾಸನೆ ಕೊಡುತ್ತೇನೆ, ನಿಯಮ 69ರ ಅಡಿಯಲ್ಲಿ ತಮ್ಮೆಲ್ಲರ ಭಾವನೆಯನ್ನು ಏನು ವ್ಯಕ್ತಪಡಿಸಿದ್ದೀರಿ, ಅದನ್ನು ಮಾನ್ಯ ಸಚಿವರು ಮತ್ತು ಸಚಿವ ಸಂಪುಟದಲ್ಲಿ ಕುಳಿತು ಚರ್ಚೆ ಮಾಡಿ, ಅದಕ್ಕೆ ನಾವು ತಕ್ಕ ಕಾರ್ಯಕ್ರಮವನ್ನು ಹಾಕುವುದರ ಜೊತೆಗೆ ತಾವೇನು ಪೀಠದಿಂದ ಲಾಭದಾಯಕ ಬೆಳೆ ಎಂದು ಹೇಳಿದ್ದೀರಿ, ಶಾಶ್ವತವಾದ ಪರಿಹಾರದ ಬಗ್ಗೆ ಮಾನ್ಯ ಪುಟ್ಟಣ್ಣಯ್ಯನವರು ಏನು ಹೇಳಿದ್ದಾರೆ, ಅದನ್ನು ಖಂಡಿತವಾಗಿ ಸ್ವಾಗತ ಮಾಡತಕ್ಕಂಥಾದ್ದು, ಅದರ ಬಗ್ಗೆ ಚಿಂತನೆಯನ್ನು ಮಾಡುತ್ತೇವೆ.

ಅಧ್ಯಕ್ಷರು : ಈಗ ಸದನವನ್ನು ಮುಂದೂಡಿ ಮತ್ತೆ ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರುತ್ತದೆ.

(ಸದನವು ತನ್ನ ಕಲಾಪವನ್ನು ಮಧ್ಯಾಹ್ನ 2.05ಕ್ಕೆ ಮುಕ್ತಾಯಗೊಳಿಸಿ ಮತ್ತೆ ದಿನಾಂಕ 10.06.2013 ರಂದು ಸೋಮವಾರ ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)